ಸಂಪುಟ 01 | ಸಂಚಿಕೆ 172 ಬುಧವಾರ 26 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1)ಮೀಲಾದ್-ಉನ್-ನಬಿ (ಈದ್-ಎ-ಮೀಲಾದ್)**
ಮೀಲಾದ್-ಉನ್-ನಬಿ ಎಂಬುದು ಪ್ರವಾದಿ ಮುಹಮ್ಮದ್ ಅವರ ಜನ್ಮದಿನದ ಸ್ಮರಣಾರ್ಥ ಆಚರಿಸಲಾಗುವ ಮಹತ್ವದ ಇಸ್ಲಾಮಿಕ್ ದಿನವಾಗಿದೆ. ಈ ದಿನವನ್ನು ಈದ್-ಎ-ಮೀಲಾದ್ ಎಂದೂ ಕರೆಯಲಾಗುತ್ತದೆ. ಮುಸ್ಲಿಂ ಸಮುದಾಯದವರು ಪ್ರಾರ್ಥನೆ, ಧಾರ್ಮಿಕ ಉಪನ್ಯಾಸ, ಕುರಾನ್ ಪಠಣ ಹಾಗೂ ಪ್ರವಾದಿಯವರ ಶಾಂತಿ, ಪ್ರೀತಿ ಮತ್ತು ಸಹೋದರತ್ವದ ಸಂದೇಶಗಳನ್ನು ಸ್ಮರಿಸುವ ಮೂಲಕ ಈ ದಿನವನ್ನು ಆಚರಿಸುತ್ತಾರೆ.

**2)ಅಂತರರಾಷ್ಟ್ರೀಯ ನಾಯಿ ದಿನ (International Dog Day)** ನಾಯಿಗಳ ಮೇಲಿನ ಪ್ರೀತಿ, ಕಾಳಜಿ ಮತ್ತು ಅವುಗಳ ಮಹತ್ವವನ್ನು ಗೌರವಿಸುವ ದಿನ.

**3)ಮಹಿಳಾ ಸಮಾನತೆ ದಿನ (Women's Equality Day)**
ಮಹಿಳೆಯರ ಸಮಾನ ಹಕ್ಕುಗಳು ಮತ್ತು ಮತದಾನದ ಹಕ್ಕಿನ ಮಹತ್ವವನ್ನು ಸ್ಮರಿಸುವ ದಿನ.

**4)ಓಣಂ ? ಸುಗ್ಗಿಯ ಹಬ್ಬ (Onam Harvest Festival)**
ಓಣಂ ಕೇರಳದ ಅತ್ಯಂತ ಪ್ರಮುಖ ಮತ್ತು ಪ್ರಸಿದ್ಧ ಹಬ್ಬವಾಗಿದೆ. ಇದು ಸುಗ್ಗಿಯ ಹಬ್ಬ ಎಂದೂ ಕರೆಯಲ್ಪಡುತ್ತದೆ. ಉತ್ತಮ ಬೆಳೆ ಮತ್ತು ಸಮೃದ್ಧಿಗಾಗಿ ಪ್ರಕೃತಿಗೆ ಕೃತಜ್ಞತೆ ಸಲ್ಲಿಸುವ ಈ ಹಬ್ಬವನ್ನು ಸಂತೋಷ, ಸಡಗರದಿಂದ ಆಚರಿಸಲಾಗುತ್ತದೆ.

## ಸುಭಾಷಿತ

ಜಗತ್ತಿನ ಅರ್ಧ ಭಾಗದಲ್ಲಿ ಕತ್ತಲೆ ಮತ್ತೆ ಅರ್ಧ ಭಾಗದಲ್ಲಿ ಬೆಳಕು ಇರುವಂತೆ, ಜೀವನದಲ್ಲಿಯೂ ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಇರುತ್ತವೆ. ಬೆಳಕಿನಲ್ಲಿ ಇದ್ದು ಒಳ್ಳೆಯವರಾಗಿ ಉಳಿಯುವುದು ನಮ್ಮ ಕರ್ತವ್ಯ.
-ಅನಿತಾ ನಾಯರ್

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# 10 ವರ್ಷ ಪೂರೈಸಿದ ಯುಪಿಐ : ಡಿಜಿಟಲ್ ಕ್ರಾಂತಿಗೆ ಪ್ರಧಾನಿ ಮೋದಿ ಶ್ಲಾಘನೆ

❏ ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಭಾರತದ ಆರ್ಥಿಕ ಹಾಗೂ ತಂತ್ರಜ್ಞಾನ ಇತಿಹಾಸದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿರುವ ಏಕೀಕೃತ ಪಾವತಿ ಇಂಟರ್ಫೇಸ್ (ಯುಪಿಐ) ಯಶಸ್ವಿಯಾಗಿ 10 ವರ್ಷಗಳನ್ನು ಪೂರೈಸಿದೆ. ಈ ಮಹತ್ವದ ಮೈಲಿಗಲ್ಲು ಭಾರತದ ಡಿಜಿಟಲ್ ಪಾವತಿ ವ್ಯವಸ್ಥೆ ಹಾಗೂ ಆರ್ಥಿಕ ಸೇರ್ಪಡೆಯ ಬೆನ್ನೆಲುಬಾಗಿ ಯುಪಿಐ ಬೆಳೆದುಬಂದ ಹಾದಿಯನ್ನು ಸಾರುತ್ತದೆ. ಈ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಯುಪಿಐ ದಶಕದ ಸಂಭ್ರಮವನ್ನು ಆಚರಿಸಿ, ಅದರ ವ್ಯಾಪಕ**



**ಬೆಳವಣಿಗೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.**

ಯುಪಿಐ ಆರಂಭವಾಗಿ ಒಂದು ದಶಕ ಪೂರ್ಣಗೊಂಡಿರುವ ಕುರಿತು ಎಕ್ಸ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ಒಂದು ದಶಕದ ಹಿಂದೆ ಜಾರಿಗೆ ಬಂದ ಯುಪಿಐ ಭಾರತದ ಡಿಜಿಟಲ್ ಪಾವತಿ ಪಯಣದಲ್ಲಿ ಪ್ರಮುಖ ತಿರುವು ತಂದಿದೆ ಎಂದು ಹೇಳಿದ್ದಾರೆ. ಯುಪಿಐನ ಪ್ರಮಾಣ ಮತ್ತು ವ್ಯಾಪ್ತಿಯು ಪ್ರತಿಯೊಬ್ಬ ಭಾರತೀಯನು ಹೆಮ್ಮೆಪಡಬೇಕಾದ ವಿಷಯವಾಗಿದೆ ಎಂದು ಅವರು ತಿಳಿಸಿದ್ದಾರೆ.

ಅಲ್ಲದೆ, ಕಳೆದ ಹತ್ತು ವರ್ಷಗಳಲ್ಲಿ ಯುಪಿಐ ತಮ್ಮ ದೈನಂದಿನ ಜೀವನದ ಮೇಲೆ ಹೇಗೆ ಪರಿಣಾಮ ಬೀರಿದೆ ಹಾಗೂ ತಮ್ಮ ಅನುಭವ ಹೇಗಿದೆ ಎಂಬುದನ್ನು ನಾಗರಿಕರು ಹಂಚಿಕೊಳ್ಳುವಂತೆ ಅವರು ಆಹ್ವಾನಿಸಿದ್ದಾರೆ.ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಂತ್ರಕ ಮೇಲ್ವಿಚಾರಣೆಯಲ್ಲಿ ಭಾರತೀಯ ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) 2016ರ ಆಗಸ್ಟ್ 25ರಂದು ಯುಪಿಐ ಅನ್ನು ಅಧಿಕೃತವಾಗಿ ಪ್ರಾರಂಭಿಸಿತು. ಅಂದಿನಿಂದ ಈ ವ್ಯವಸ್ಥೆ ದೇಶಾದ್ಯಂತ ಅಪಾರ ಬೆಳವಣಿಗೆ ದಾಖಲಿಸಿದೆ.

2016-17ರಲ್ಲಿ ಕೇವಲ 1.78 ಕೋಟಿಯಷ್ಟಿದ್ದ ವಾರ್ಷಿಕ ಯುಪಿಐ ವಹಿವಾಟುಗಳ ಸಂಖ್ಯೆ, 2025-26ರ ವೇಳೆಗೆ 24,162 ಕೋಟಿಗೂ ಅಧಿಕಕ್ಕೆ ತಲುಪಿದೆ. ಇದು ಸುಮಾರು 13,000 ಪಟ್ಟು ಏರಿಕೆಯಾಗಿದೆ.ವಹಿವಾಟಿನ

4ನೇ ಪುಟಕ್ಕೆ

## ಎಸ್‌ಐಆರ್ ಕುರಿತು ವಿಶೇಷ ಗ್ರಾಮಸಭೆ

❏ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ತಾಲೂಕಿನ ಕಿಲ್ಲಾರಹಟ್ಟಿ ಗ್ರಾಮ ಪಂಚಾಯಿತಿಯಲ್ಲಿ ಎಸ್‌ಐಆರ್ (ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ) ಕುರಿತು ವಿಶೇಷ ಗ್ರಾಮಸಭೆ ನಡೆಯಿತು. ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ್ ಅವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು.**

ಮತದಾರರ ಪಟ್ಟಿಯಲ್ಲಿ ನೋಂದಣಿಗೆ ಅರ್ಹ-ರಿರುವ ಮತದಾರರ ಹೆಸರು ಸೇರ್ಪಡೆ, ಮತದಾರರ ವಿವರಗಳ ತಿದ್ದುಪಡಿ ಹಾಗೂ ಅನರ್ಹ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕುವ ಕು-ರಿತು ಸಭೆಯಲ್ಲಿ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರು, ಗ್ರಾಪಂ ಅಭಿವೃದ್ಧಿ ಅಧಿಕಾರಿ, ತಾಪಂ ಸಿಬ್ಬಂದಿ,



ಸಭೆಯಲ್ಲಿ ಕರಡು ಮತದಾರರ ಪಟ್ಟಿಯ ವಿವರಗಳನ್ನು ಓದಿ ತಿಳಿಸಲಾಯಿತು.

ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತು ಗ್ರಾಪಂ ಸಿಬ್ಬಂದಿ ಉಪಸ್ಥಿತರಿದ್ದರು.

## ಶ್ರದ್ಧಾಭಕ್ತಿಯಿಂದ ದ್ಯಾವಮ್ಮ, ಹುಲಿಗೆಮ್ಮ ದೇವಿ ಗಂಗೆಸ್ಥಳ ಮೆರವಣಿಗೆ

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಕಂಪ್ಲಿ-ಕೋಟೆಯಲ್ಲಿ ಗಂಗಾಮತ ಸಮಾಜ ಹಾಗೂ ಸ್ಥಳೀಯ ವರ್ಗದ ಸಹಕಾರದೊಂದಿಗೆ ಆರಾಧ್ಯ ದೇವರಾದ ಶ್ರೀ ಗ್ರಾಮ ದೇವತೆ ದ್ಯಾವಮ್ಮ, ಹುಲಿಗೆಮ್ಮ ದೇವಿಯ ಗಂಗೆಸ್ಥಳ ಮೆರವಣಿಗೆ ಶ್ರದ್ಧಾಭಕ್ತಿಯಿಂದ ಮಂಗಳವಾರ ಜರುಗಿತು.**

ಮೆರವಣಿಗೆಯಲ್ಲಿ ತಾಷಾರಾಂಡೋಲ್, ಡೊಳ್ಳು ಕುಣಿತ, ಮಂಗಳವಾದ್ಯ ಸೇರಿದಂತೆ ವಿವಿಧ ಕಲಾ ಪ್ರಕಾರಗಳು ಪಾಲ್ಗೊಂಡಿದ್ದರು. ಸಾಕಷ್ಟು ಭಕ್ತರು ದೇವಿಯರ ದರ್ಶನ ಪಡೆದುಕೊಂಡರು.

ಈ ಸಂದರ್ಭದಲ್ಲಿ ಗಂಗಾಮತ ಸಮಾಜದ ಗೌರವಾಧ್ಯಕ್ಷ ಗಂಜಿ ಹನುಮಂತಪ್ಪ, ಕಂಬತ್ ಕೃಷ್ಣ, ದೇವಸ್ಥಾನ ಸಮಿತಿ ಅಧ್ಯಕ್ಷ ಅದ್ದಪ್ಪ



ಇಲ್ಲಿನ ಕೋಟೆಯ ತುಂಗಭದ್ರ ನದಿ ತಟದಲ್ಲಿ ಗಂಗೆಪೂಜೆ ಸಲ್ಲಿಸಿದ ನಂತರ ವೆಂಕಟ-ರಮಣ ದೇವಸ್ಥಾನದಿಂದ ಆರಂಭಗೊಂಡ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ದೇವಸ್ಥಾನದಲ್ಲಿ ಸಂಪನ್ನಗೊಂಡಿತು. ಇಲ್ಲಿನ ತಿಮ್ಮಪ್ಪ, ಸದಸ್ಯ ರಮೇಶ್ ಕಂಬತ್, ಮುಖಂಡರಾದ ಸೆರೆಗಾರ ನಾಗರಾಜ, ಕಟ್ಟೆ ಸಣ್ಣ ದುರುಗಪ್ಪ, ಕಟ್ಟೆ ವೀರಣ್ಣ ಸೂಗೂರು, ಕಟ್ಟೆ ವಿರೇಶ, ಸೆರೆಗಾರ ಕೃಷ್ಣ, ಬಿ.ರಮೇಶ, ಬಾಗ್ಲಿ ಮಂಜು, ಕಂಬತ್ ಧನ್‌ರಾಜ್, ಸೇರಿದಂತೆ ಸಕಲ ಸದ್ಭಕ್ತರು ಪಾಲ್ಗೊಂಡಿದ್ದರು.

## ಗಾಣಿಗ ಸಮಾಜದಿಂದ ಮುಖ್ಯಾಧಿಕಾರಿಗೆ ಗೌರವ ಸತ್ಕಾರ

❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪುರಸಭೆಗೆ ಮುಖ್ಯಾಧಿಕಾರಿಯಾಗಿ ಇತ್ತೀಚಿಗೆ ಆಗಮಿಸಿದ ಸುನೀಲ ಪಾಟೀಲ ಇವ-ರಿಗೆ ಸ್ಥಳೀಯ ಗಾಣಿಗ(ಸಜ್ಜನ) ಸಮಾಜದ ವತಿಯಿಂದ**

ದಕ್ಷತೆಯಿಂದ ನಿರ್ವಹಿಸಲು ನಿಮ್ಮನ್ನೊಳಗೊಂಡು ಇಡೀ ಪಟ್ಟಣದ ಸರ್ವ ಸಮಾಜದ ಜನರ ಸಹಕಾರ ನನಗೆ ಅಗತ್ಯವಾಗಿದೆ. ಎಲ್ಲರ ಸಹಕಾರದಿಂದಲೇ ಪಟ್ಟಣದ ಅಭಿವೃದ್ಧಿ ಸಾಧ್ಯವಾಗುತ್ತದೆ. ಮುಂದೆಯೂ ನಿಮ್ಮೆಲ್ಲರ ಪ್ರೀತಿ ವಿಶ್ವಾಸ ಇದೇ ರೀತಿ ಯಾಗಿರಲಿ



**ಮಂಗಳವಾರ ಸನ್ಮಾನಿಸಿ ಗೌರವಿಸಲಾಯಿತು. ಸಮಾಜ ಬಾಂಧವರ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಮುಖ್ಯಾಧಿಕಾರಿ ಪಾಟೀಲ ಅವರು ನೀವು ನನ್ನ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸಕ್ಕೆ ಋಣಿ ಯಾಗಿರುವೆ.**

ನಾನು ನನ್ನ ಈ ಜವಾಬ್ದಾರಿಯನ್ನು ಎಂದರು. ಈ ಸಮಯದಲ್ಲಿ ಗಾಣಿಗ(ಸಜ್ಜನ) ಸಮಾಜದ ಅಧ್ಯಕ್ಷರಾದ ಪ್ರಕಾಶ ಸಜ್ಜನ, ಹಿರಿಯರಾದ ಶರಣಪ್ಪ ಸಜ್ಜನ,ಪುರಸಭೆ ಮಾಜಿ ಸದಸ್ಯ ರಾಜು ಸಜ್ಜನ, ರವಿ ಸಜ್ಜನ, ಚಂದು ಸಜ್ಜನ, ಕಾಶಿನಾಥ ಸಜ್ಜನ, ನಾಗು ಸಜ್ಜನ, ಪ್ರಕಾಶ ಸಜ್ಜನ, ಹಂಪಣ್ಣ ಸಜ್ಜನ, ಶಿವು ಸಜ್ಜನ ಮತ್ತಿತರರು ಇದ್ದರು.

# ಸಿಂಧನೂರು ಕ್ಷೇತ್ರದ ಕರಡು ಮತದಾರರ ಪಟ್ಟಿ ಪ್ರಕಟ

### 43,115 ಮತದಾರರ ಹೆಸರುಗಳು ಡಿಲೀಟ್ – ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಸೆ.23ರವರೆಗೆ ಅವಕಾಶ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಸಿಂಧನೂರು ವಿಧಾನಸಭಾ ಕ್ಷೇತ್ರದ (58) ವಿಶೇಷ ಸಮಗ್ರ ಪರಿಷ್ಕರಣೆ (SIR-2026) ಅಡಿಯಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ.**

ಸಿಂಧನೂರು ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,40,941 ಮತದಾರರ ಪೈಕಿ 1,97,826 ಮತದಾರರನ್ನು ಕರಡು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗಿದೆ. ಹಿಂದಿನ ಮತದಾರರ ಪಟ್ಟಿಗೆ ಹೋಲಿಸಿದರೆ ಒಟ್ಟು 43,115 ಮತದಾರರ ಹೆಸರುಗಳನ್ನು ವಿವಿಧ ಕಾರಣಗಳಿಂದ ಕೈಬಿಡಲಾಗಿದೆ.

ಕೈಬಿಡಲಾದ ಮತದಾರರ ವಿವರದಲ್ಲಿ 6,778 ಮಂದಿ ಮೃತಪಟ್ಟವರು, 31,954 ಮಂದಿ ಶಾಶ್ವತವಾಗಿ ಸ್ಥಳಾಂತರಗೊಂಡವರು, 1,555 ಮಂದಿ ಗುರುತಿಸಲಾಗದ ಮತದಾರರು, 2,805 ಮಂದಿ ಡುಪ್ಲಿಕೇಟ್ ಮತದಾರರು ಹಾಗೂ 23 ಮಂದಿ ಇತರೆ ವರ್ಗಕ್ಕೆ ಸೇರಿದವರು ಎಂದು ತಿಳಿಸಲಾಗಿದೆ. ಒಟ್ಟಾರೆ 2025ರ ಮತದಾರರ ಪಟ್ಟಿಗೆ ಹೋಲಿಸಿದರೆ 17.90% ಮತದಾರರು ASDD ವರ್ಗಕ್ಕೆ ಸೇರಿದ್ದಾರೆ.





ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ

ಕರಡು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸೇರ್ಪಡೆಯಾಗದಿರುವುದು ಅಥ-’ವಾ ಮತದಾರರ ವಿವರಗಳಲ್ಲಿ ಯಾವುದೇ ತಪ್ಪು ಕಂಡುಬಂದಲ್ಲಿ, ಸಾರ್ವಜನಿಕರು ಆಗಸ್ಟ್ 24ರಿಂದ ಸೆಪ್ಟೆಂಬರ್ 23, 2026ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ.

ಅರ್ಹ ಹೊಸ ಮತದಾರರು ಹಾಗೂ ಪಟ್ಟಿಯಲ್ಲಿ ಹೆಸರು ಸೇರ್ಪಡೆ/ತಿದ್ದುಪಡಿ ಅಗತ್ಯವಿರುವವರು ಸಂಬಂಧಪಟ್ಟ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿದೆ. ಅಗತ್ಯವಿರುವ ಸಂದರ್ಭಗಳಲ್ಲಿ ಮತದಾರರಿಗೆ ನೋಟಿಸ್ ನೀಡಿ, ಸಂಬಂಧಪಟ್ಟ ಅಧಿಕಾರಿಗಳ ಮುಂದೆ ವಿಚಾರಣೆ ನಡೆಸಿ ಅರ್ಜಿಗಳನ್ನು ವಿಲೇವಾರಿ ಮಾಡಲಾಗುತ್ತದೆ. 18 ವರ್ಷ ಪೂರ್ಣಗೊಳಿಸಿರುವ ಅರ್ಹ ಯುವ ಮತದಾರರು ಸಹ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಅವಕಾಶವಿದ್ದು, ಸಂಬಂಧಪಟ್ಟ ಬಿಎಲ್‌ಒ (ಃಐಔ) ಅಥವಾ ಚುನಾವಣಾಧಿಕಾರಿಗಳನ್ನು ಸಂಪರ್ಕಿಸಬಹುದು.

ಸಾರ್ವಜನಿಕರು ಕರಡು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಹಾಗೂ ವಿವರಗಳನ್ನು ಪರಿಶೀಲಿಸಿಕೊಂಡು, ಯಾವುದೇ ದೋಷ ಅಥ-’ವಾ ಹೆಸರು ಕೈಬಿಟ್ಟಿರುವುದು ಕಂಡುಬಂದಲ್ಲಿ ನಿಗದಿತ ಅವಧಿಯೊಳಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸುವಂತೆ ಸಿಂಧನೂರು ತಹಶೀಲ್ದಾರ್ ಹಾಗೂ ಸಹಾಯಕ ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. “ನಿಮ್ಮ ಮತ ನಿಮ್ಮ ಹಕ್ಕು. ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳಿ.”

# ತಾಳಿಕೋಟೆಯಲ್ಲಿ ಆ.26ರಿಂದ ಸೆ.6ರವರೆಗೆ ಸೀರತ್ ಅಭಿಯಾನ ಯಶಸ್ವಿಗೆ ಎಲ್ಲರ ಸಹಕಾರ ಇರಲಿ: ಹುಸೇನಪಟೇಲ

❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ :ಪ್ರವಾದಿ ಮುಹಮ್ಮದ್(ಸ) ಅವರ ಜನ್ಮದಿನದ ಪ್ರಯುಕ್ತ ಜಮಾತೆ ಇಸ್ಲಾಮಿ ಹಿಂದ್ ಸಂಘಟನೆಯು ರಾಜ್ಯಾದ್ಯಂತ ಆಗಸ್ಟ್ 26ರಿಂದ ಸೆಪ್ಟೆಂಬರ್ 6ರವರೆಗೆ ಸೀರತ್ ಅಭಿಯಾನವನ್ನು ಹಮ್ಮಿಕೊಂಡಿದೆ. ಇದರ ನಿಮಿತ್ಯವಾಗಿ ಪಟ್ಟಣದಲ್ಲಿ ಹಲವಾರು ಕಾರ್ಯಕ್ರಮಗಳು ನಡೆಯಲಿವೆ, ಇದರ ಯಶಸ್ವಿಗೆ ಎಲ್ಲರ ಸಹಕಾರ ಇರಲಿ ಎಂದು ಅಭಿಯಾನದ ಉಪ ಸಂಚಾಲಕ ಹುಸೇನಪಟೇಲ ಹೇಳಿದರು.**

ಮಂಗಳವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ ಜಮಾತೆ ಇಸ್ಲಾಮೀ ಹಿಂದ್ ಕರ್ನಾಟಕದ ವತಿಯಿಂದ ನಡೆಯಲಿರುವ ಈ ಅಭಿಯಾನಕ್ಕೆ “ಕ್ರಾಂತಿಯ ಜ್ಯೋತಿ: ಪ್ರವಾದಿ





ಮುಹಮ್ಮದ್(ಸ)” ಎಂಬ ಶೀರ್ಷಿಕೆ ನೀಡಲಾಗಿದೆ. ಅಭಿಯಾನದ ಅಂಗವಾಗಿ ಪಟ್ಟಣದಲ್ಲಿ 10 ದಿನಗಳ ಕಾಲ ನಿರಂತರವಾಗಿ ಕಾರ್ಯಕ್ರಮಗಳು ನಡೆಯಲಿದ್ದು ಇದರಲ್ಲಿ ಪಟ್ಟಣದ ಸರ್ವ ಮುಖಂಡರ ಸಭೆ, ವಿಚಾರ ಸಂಕಿರಣಗಳು,ಶಾಲಾ- ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ ಹಾಗೂ ಉಪನ್ಯಾಸ ಕಾರ್ಯಕ್ರಮ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಪ್ರವಾದಿ ಮುಹಮ್ಮದ್(ಸ) ಅವರ ಜೀವನ, ಸಂದೇಶ, ಮಾನವೀಯ ಮೌಲ್ಯಗಳು, ಸಾಮಾಜಿಕ ನ್ಯಾಯ, ಶಾಂತಿ ಮತ್ತು ಸೌಹಾರ್ದತೆಯ ಕುರಿತು ಜನರಲ್ಲಿ ಅರಿವು ಮೂಡಿಸುವುದು ಅಭಿಯಾನದ ಪ್ರಮುಖ ಉದ್ದೇಶವಾಗಿದೆ.

ಅಭಿಯಾನದ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು, ಧಾರ್ಮಿಕ ಮುಖಂಡರು, ಸಾಮಾಜಿಕ ಕಾರ್ಯಕರ್ತರನ್ನು ಭೇಟಿ ಮಾಡುವ ಕಾರ್ಯಕ್ರಮಗಳು ಒಳಗೊಂಡಿವೆ. ಪ್ರವಾದಿಯವರ ಜೀವನ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವ ಜೊತೆಗೆ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಹಬಾಳ್ವೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಈ ಎಲ್ಲ ಕಾರ್ಯಕ್ರಮಗಳನ್ನು ಜಮಾತೆ ಇಸ್ಲಾಮಿ ಹಿಂದ್ ಸ್ಥಾನೀಯ ಶಾಖೆಯ ವತಿಯಿಂದ ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು. ಜಮಾತೆ ಇಸ್ಲಾಮಿ ಹಿಂದ್ ನಗರ ಶಾಖೆ ಅಧ್ಯಕ್ಷ ಮುಜಾಹೀದ ನಮಾಜಕಟ್ಟಿ ಅವರು ಮಾತನಾಡಿ ಕಳೆದ 30 ವರ್ಷಗಳಿಂದ ಪಟ್ಟಣದಲ್ಲಿ ನಮ್ಮ ಸಂಘಟನೆಯು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ ಇದಕ್ಕೆ ಇಲ್ಲಿಯ ಎಲ್ಲ ಸಮಾಜದ ಬಾಂಧವರು ಸಹಕಾರ ನೀಡುತ್ತಾ ಬಂದಿದ್ದಾರೆ ಈಗ ನಡೆಯಲಿರುವ ಅಭಿಯಾನಕ್ಕೂ ಅವರ ಸಹಕಾರವನ್ನು ನಾವು ಬಯಸುತ್ತೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮೌಲಾನಾ ಅಜರುದ್ದೀನ ಖಾಸಮಿ, ಅಭಿಯಾನದ ಸಂಚಾಲಕ ಎಂ.ಎ.ಮೈತ್ರಿ(ಇಂಜಿನಿಯರ್), ಕುತ್ಬುದ್ದೀನ ಮೋಮಿನ, ಮೈನುದ್ದೀನ ಕೊರ್ತಿ, ಜಾವೀದ ಮುಲ್ಲಾ, ಯಾಸೀನ ಬಾಗವಾನ, ಮೊಹಮ್ಮದ್ ಕಾಸಿಂ ನಮಾಜಕಟ್ಟಿ, ಶಬ್ಬೀರ ಲಾಹೋರಿ, ಇಸ್ಮಾಯೀಲ ಸಾಸಬಾಳ, ಅಜೀಜ ಜಮಾದಾರ, ಮನ್ನು ನಮಾಜ-ಕಟ್ಟಿ, ಫಯಾಜ ಬಾಗವಾನ ಮುತ್ತಿತರರು ಇದ್ದರು.

## ಸಾಹಿತ್ಯ ಸಿಂಚನ

### ಕರುಣೆಯ ಕಿರಣ

ಕಾರುಣ್ಯ ಆಶ್ರಮದ ಕರುಣೆಯ ಮೂರ್ತಿಗಳು,
ನೊಂದವರ ಪಾಲಿನ ಆಶಾಕಿರಣಗಳು;
ಕಣ್ಣೀರ ಒರೆಸಿ ನಗು ಮೂಡಿಸುವ,
ಮಾನವೀಯತೆಯ ಮಧುರ ದೀಪಗಳು.

ನೇತ್ರ ತಜ್ಞರಾಗಿ ಸಿಂಧನೂರಿನಲಿ,
ಕಣ್ಣಿನ ಬೆಳಕಿಗೆ ಸೇವೆ ಸಲ್ಲಿಸಿ;
ಡಾ. ಚನ್ನನಗೌಡ ಆರ್. ಪಾಟೀಲ್ ಅವರು,
ಅನೇಕರ ಬದುಕಿಗೆ ಬೆಳಕಾಗಿಹರು.

ಕಣ್ಣಿಗೆ ಬೆಳಕು, ಹೃದಯಕೆ ಕರುಣೆ,
ಸೇವೆಯಲಿ ಕಾಣುವ ದೇವರ ರೂಪ;
ಕಾರುಣ್ಯ ಕುಟುಂಬದ ಹೃದಯದಲಿ,
ನಿಮ್ಮ ಸೇವೆ ಸದಾ ಅಚ್ಚಳಿಯದ ಗುರುತು.

ಸಿಂಧನೂರಿನ ಪೊಲೀಸ್ ಪಾಟೀಲ್ ಕುಟುಂಬದ
ಕರುಣೆಯ ಮೂರ್ತಿಗಳು ನಮ್ಮ ಡಾ. ಚನ್ನಾನಗೌಡ
ಪಾಟೀಲರು

ಕಾರುಣ್ಯದ ಮಡಿಲಲಿ ಕರುಣೆಯ ಹೂವು,
ಅನಾಥರ ಬಾಳಿಗೆ ಪ್ರೀತಿಯ ನೆರಳು;
ಸೇವೆ ಎಂಬ ದಾರಿಯಲಿ ಹೆಜ್ಜೆ ಹಾಕಿ,
ಮನುಜತ್ವದ ತೋಟವ ಬೆಳೆಸುವರು.

ಚನ್ನನಗೌಡ ಪಾಟೀಲ್‌ರ ಕೈಯಲಿ,
ನೇತ್ರ ಚಿಕಿತ್ಸೆಯ ಜ್ಞಾನವೆಂಬ ಜ್ಯೋತಿ;
ಕತ್ತಲೆಯ ಕಣ್ಣಿಗೆ ಬೆಳಕು ನೀಡಿ,
ಬದುಕಿಗೆ ತುಂಬುವ ಹೊಸ ಆಶಾಕಾಂತಿ.

ಕಾರುಣ್ಯ ಆಶ್ರಮದ ಪುಣ್ಯದ ಸೇವೆ,
ಡಾಕ್ಟರ್‌ರ ಹೃದಯದ ಮಾನವೀಯತೆ;
ಇವರಿಬ್ಬರ ಸಂಗಮದಿಂದ ಅರಳಲಿ,
ಸಾವಿರಾರು ಬಾಳಿನ ನಗುವಿನ ಬೆಳಕು!

ಡಾ. ಚನ್ನಬಸವ ಸ್ವಾಮಿ ಹಿರೇಮಠ
ಕಾರ್ಯಾಧ್ಯಕ್ಷರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ
ವಯಸ್ಕರ ಬುದ್ಧಿಮಾಂದ್ಯ ಆಶ್ರಮ ಸಿಂಧನೂರು

## ಪಟ್ಟಣದಲ್ಲಿ ಮಾರೆಮ್ಮ ದೇವಿ ಮೂರ್ತಿ ಮೆರವಣಿಗೆ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಪಟ್ಟಣದ 10ನೇ ವಾರ್ಡಿನ ಸಂತೆ ಮಾರುಕಟ್ಟೆ ಬಳಿಯಲ್ಲಿರುವ ಶ್ರೀ ಕೋಟಾಳ ಮಾರೆಮ್ಮ ದೇವಿಯ ನೂತನ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಗೋಪುರ ಕಳಸಾರೋಹಣ ಹಿನ್ನಲೆ ಮೂರ್ತಿ ಪುರ ಪ್ರವೇಶದ ಭವ್ಯ ಮೆರವಣಿಗೆ ಪಟ್ಟಣದಲ್ಲಿ ಅತ್ಯಂತ ಸಂಭ್ರಮ ಸಡಗರಿಂದ ಮಂಗಳವಾರ ನಡೆಯಿತು.**



ಬುಕ್ಕಸಾಗರದ ಶಿಲ್ಪಿಗಾರ ವಿಶ್ವನಾಥ ಆಚಾರ್ಯ ಅವರು ದೇವಿಯ ಮೂರ್ತಿ ಕೆತ್ತನೆ ಮಾಡಿದ್ದಾರೆ. ಇಂದಿನ ಶುಭ ಗಳಿಯಲ್ಲಿ ಬುಕ್ಕಸಾಗರದಿಂದ ಬಂದಂತಹ ದೇವಿಯ ಮೂರ್ತಿಯನ್ನು ಕಂಪ್ಲಿ ಪಟ್ಟಣದ ಹೊಸ ಬಸ್ ನಿಲ್ದಾಣ ಬಳಿಯಿಂದ ಪುರ ಪ್ರವೇಶದ ಭವ್ಯ ಮೆರವಣಿಗೆ ಆರಂಭಿಸಿ, ಉದ್ಭವ ಗಣೇಶ್ ದೇವಸ್ಥಾನ, ನಡುವಲ ಮಸೀದಿ, ಡಾ.ರಾಜುಕುಮಾರ ಮುಖ್ಯರಸ್ತೆ, ಅಂಬೇಡ್ಕರ್ ವೃತ್ತ, ಮಹಾತ್ಮಗಾಂಧಿ ವೃತ್ತ, ಸರ್ಕಾರಿ ಆಸ್ಪತ್ರೆ ಮೂಲಕ ಸಂತೆ ಮಾರುಕಟ್ಟೆ ಬಳಿಯ ದೇವಸ್ಥಾನದಲ್ಲಿ ಸಮಾವೇಶಗೊಂಡಿತು. ಈ ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ತಾಷಾರಾಂಡೋಲ್, ಮಂಗಳವಾದ್ಯ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮುಖ್ಯಗುರು ಈಶ್ವರಪ್ಪ, ಮುಖಂಡರಾದ ಮಾನ್ವಿ ರಾಮಚಂದ್ರ, ಮಾನ್ವಿ ಮಹೇಶ, ಮೌಲಾ, ಷಣ್ಮುಕ, ಗೊಗ್ಗರಸ್ವಾಮಿ, ರಾಘವೇಂದ್ರ, ಉಮೇಶ, ಈರಣ್ಣ ಸೇರಿದಂತೆ ಸ್ಥಳೀಯ ಹಾಗೂ ಸುತ್ತಮುತ್ತಲಿನ ಸದ್ಭಕ್ತರು ಪಾಲ್ಗೊಂಡಿದ್ದರು.

# ಆಗಸ್ಟ್ 26 ರಿಂದ ರಾಜ್ಯಾದ್ಯಂತ ಸೀರತ್ ಅಭಿಯಾನ

## 'ಕ್ರಾಂತಿಯ ಜ್ಯೋತಿ: ಪ್ರವಾದಿ ಮುಹಮ್ಮದ್(ಸ)' ಶೀರ್ಷಿಕೆಯಡಿ ಜಮಾಅತೆ ಇಸ್ಲಾಮೀ ಹಿಂದ್‌ನಿಂದ ಬೃಹತ್ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು (ಆಗಸ್ಟ್ 25): ಪ್ರವಾದಿ ಮುಹಮ್ಮದ್(ಸ) ಅವರ ಜನ್ಮದಿನದ ಪ್ರಯುಕ್ತ ಜಮಾಅತೆ ಇಸ್ಲಾಮೀ ಹಿಂದ್ ಕರ್ನಾಟಕದ ವತಿಯಿಂದ ದಿನಾಂಕ 26-08-2026 ರಿಂದ 06-09-2026 ರವರೆಗೆ ರಾಜ್ಯಾದ್ಯಂತ 'ಕ್ರಾಂತಿಯ ಜ್ಯೋತಿ: ಪ್ರವಾದಿ ಮುಹಮ್ಮದ್(ಸ)' ಶೀರ್ಷಿಕೆಯಡಿ ಸೀರತ್ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಇಂದು ಸಿಂಧನೂರಿನಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಪ್ರಕಟಿಸಲಾಯಿತು.**




ಪ್ರವಾದಿ ಮುಹಮ್ಮದ್(ಸ) ಅವರು ತಂದ ಸಮಗ್ರ ಕ್ರಾಂತಿಯು ಸತ್ಯ, ನ್ಯಾಯ, ಕರುಣೆ, ಮಾನವ ಸಮಾನತೆ, ಮಾನವ ಘನತೆ ಹಾಗೂ ಮಾನವ ಕುಲದ ಏಕತೆಯ ಮೇಲೆ ಸ್ಥಾಪಿತವಾಗಿದೆ.ಅವರು ಜನರ ಮನಸ್ಸನ್ನು ಸಂಸ್ಕರಿಸಿ, ನೈತಿಕತೆ ಮತ್ತು ಚಾರಿತ್ರ್ಯವನ್ನು ಶುದ್ಧೀಕರಿಸುವ ಮೂಲಕ ಆಧ್ಯಾತ್ಮಿಕ, ಸಾಮಾಜಿಕ, ಕೌಟುಂಬಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಆಡಳಿತ ಕ್ಷೇತ್ರಗಳಲ್ಲಿ ಮಾನವೀಯ ಕ್ರಾಂತಿಯನ್ನು ತಂದರು. ಸುಭಿಕ್ಷೆ ಮತ್ತು ನಿರ್ಭಯತ್ವದ ಸಮಾಜ ನಿರ್ಮಾಣ ಮಾಡುವುದು ಅವರ ಮುಖ್ಯ ಗುರಿಯಾಗಿತ್ತು.ಪ್ರವಾದಿಯವರ ಈ ದಿವ್ಯ ಸಂದೇಶಗಳನ್ನು ಕನ್ನಡ ಜನತೆಗೆ ಪರಿಚಯಿಸುವುದು, ಸಮಾಜದಲ್ಲಿರುವ ತಪ್ಪು ಕಲ್ಪನೆಗಳನ್ನು ನಿವಾರಿಸುವುದು ಮತ್ತು ಪರಸ್ಪರ ಸೌಹಾರ್ದತೆಯನ್ನು ಬಲಪಡಿಸುವುದು ಈ ಅಭಿಯಾನದ ಆಶಯವಾಗಿದೆ. ಅಭಿಯಾನದ ಪ್ರಯುಕ್ತ ರಾಜ್ಯಾದ್ಯಂತ ಖ್ಯಾತ ಸಾಹಿತಿ ಶ್ರೀ ಯೋಗೇಶ್ ಮಾಸ್ಟರ್ ಅವರ 'ಮಾನವ ಮನಸ್ಸಿನ ಕೃಷಿಕ – ಮನದೊಡೆಯ ಪ್ರವಾದಿ ಮುಹಮ್ಮದ್(ಸ)' ಮತ್ತು 'ವಾರ್ತಾ ಭಾರತಿ' ದಿನಪತ್ರಿಕೆಯ ಪ್ರಧಾನ ಸಂಪಾದಕರಾದ ಅಬ್ದುಸ್ಸಲಾಮ್ ಪುತ್ತಿಗೆ ಅವರ ಎರಡು ಪ್ರಮುಖ ಗ್ರಂಥಗಳನ್ನು ಬಿಡುಗಡೆಗೊಳಿಸಲಾಗುವುದು. ಅಭಿಯಾನದ ಅವಧಿಯಲ್ಲಿ ವೈಯಕ್ತಿಕ ಭೇಟಿ, 'ಕ್ರಾಂತಿಯ ಜ್ಯೋತಿ ಪ್ರವಾದಿ ಮುಹಮ್ಮದ್(ಸ)' ಶೀರ್ಷಿಕೆಯಡಿ ವಿಚಾರಗೋಷ್ಠಿಗಳು, ಸಾರ್ವಜನಿಕ ಸಮಾವೇಶಗಳು, ಸಂವಾದ, ಚರ್ಚಾಗೋಷ್ಠಿಗಳು, ಸೀರತ್ ಪ್ರವಚನ, ಸೀರತ್ ಎಕ್ಸಿಬಿಶನ್, ಸಮಾಜಸೇವಾ ಚಟುವಟಿಕೆಗಳು ಹಾಗೂ ಸೌಹಾರ್ದ ಸಂದೇಶ ರ?ಯಾಲಿಗಳು ನೆರವೇರಲಿವೆ.

ಪತ್ರಿಕಾಗೋಷ್ಠಿಯಲ್ಲಿ ಸುಮಯ್ಯಾ ಬೇಗಂ ( ಅಧ್ಯಕ್ಷರು ಮಹಿಳಾ ವಿಭಾಗ ಜಮಾಅತ್ ಇಸ್ಲಾಮೀ ಹಿಂದ್ ಸಿಂಧನೂರು), ಲುಬ್ನಾ ಬೆಳಗಾಮಿ ( ಉಪಾಧ್ಯಕ್ಷರು ,ಮಹಿಳಾ ವಿಭಾಗ ಜಮಾಅತ್ ಇಸ್ಲಾಮೀ ಹಿಂದ್ ಸಿಂಧನೂರು), ಅತಿಯಾ ಫೌಝಿಯಾ ( ಜಂಟಿ ಕಾರ್ಯದರ್ಶಿ, ಮಹಿಳಾ ವಿಭಾಗ, ಜಮಾಅತ್ ಇಸ್ಲಾಮೀ ಹಿಂದ್ ಸಿಂಧನೂರು), ಹುಸೇನ್ ಸಾಬ್, ಅಧ್ಯಕ್ಷರು, ಜಮಾಅತ್ ಇಸ್ಲಾಮೀ ಹಿಂದ್ ಸಿಂಧನೂರು ಘಟಕ, ಖಾಜಿ ಜಾವೀದ್ ( ಅಭಿಯಾನ ಕಾರ್ಯದರ್ಶಿ,ಸೀರತ್ ಕಮಿಟಿ), ಖಾಜಾ ಪಾಷಾ, ಸದಸ್ಯರು ಜಮಾಅತ್ ಇಸ್ಲಾಮೀ ಹಿಂದ್ ಸಿಂಧನೂರು, ಅಫ್ಜಲ್ ಹುಸೈನ್, ಅಧ್ಯಕ್ಷರು, ,ಎಂ ಸಿಂಧನೂರು, ಅಬುಲೈಸ್ ನಾಯ್ಕ, ಅಧ್ಯಕ್ಷರು,ಸಾಲಿಡಾರಿಟಿ ಯೂತ್ ಮೂವ್ಮೆಂಟ್ ಸಿಂಧನೂರು, ನಯೀಮ್ ಇರ್ಫಾನ್, ಕಾರ್ಯದರ್ಶಿ, ,ಥಿಟ ಸಿಂಧನೂರು ಭಾಗವಹಿಸಿದ್ದರು.

# ಹಾವು ಕಡಿತ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕುರಿತು ಜನಜಾಗೃತಿ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಜಂಗಮರ ಹಟ್ಟಿ, ಆಗಸ್ಟ್ 25: ಹಾವು ಕಡಿತದಿಂದ ಉಂಟಾಗುವ ಸಾವುಗಳನ್ನು ತಡೆಗಟ್ಟುವ ಹಾಗೂ ಮೂಢನಂಬಿಕೆಗಳಿಗೆ ಒಳಗಾಗದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಜಂಗಮರ ಹಟ್ಟಿಯಲ್ಲಿ ಆರೋಗ್ಯ ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**



ಕಾರ್ಯಕ್ರಮದಲ್ಲಿ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು, ಹಾವು ಕಚ್ಚಿದ ಸಂದರ್ಭದಲ್ಲಿ ಯಾವುದೇ ರೀತಿಯ ಮೂಢನಂಬಿಕೆಗಳಿಗೆ ಒಳಗಾಗದೆ ತಕ್ಷಣವೇ ಸಮೀಪದ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆಯಬೇಕು ಎಂದು ತಿಳಿಸಿದರು. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆದರೆ ಜೀವ ಉಳಿಸಬಹುದಾಗಿದ್ದು, ಜನರು ಈ ಕುರಿತು ಹೆಚ್ಚಿನ ಜಾಗೃತಿ ಹೊಂದಬೇಕು ಎಂದು ಹೇಳಿದರು.

ಹಾವು ಕಚ್ಚಿದಾಗ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ವಿವರಿಸಿದ ಅವರು, ಹೆದರಬಾರದು ಹಾಗೂ ಹಾವು ಕಡಿತಕ್ಕೆ ಒಳಗಾದ ವ್ಯಕ್ತಿಯನ್ನು ಸಮಾಧಾನಪಡಿಸಬೇಕು. ಹಾವಿನಿಂದ ನಿಧಾನವಾಗಿ ದೂರ ಸರಿಯಬೇಕು. ಹಾವು ಕಚ್ಚಿದ ದೇಹದ ಭಾಗದಲ್ಲಿರುವ ಪಾದರಕ್ಷೆ, ಕಾಲುಂಗುರ, ಆಭರಣ, ಕೈಗಡಿಯಾರ ಹಾಗೂ ಬಿಗಿಯಾದ ಬಟ್ಟೆಗಳನ್ನು ತೆಗೆದುಹಾಕಬೇಕು. ಹಾವು ಕಡಿತಕ್ಕೆ ಒಳಗಾದ ವ್ಯಕ್ತಿಯನ್ನು ಎಡಭಾಗದಲ್ಲಿ ಮಲಗಿಸಿ, ಕಚ್ಚಿದ ಭಾಗವನ್ನು ಅಲುಗಾಡದಂತೆ ನೋಡಿಕೊಳ್ಳಬೇಕು. ತಕ್ಷಣವೇ ಸಮೀಪದ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಸೂಕ್ತ ಚಿಕಿತ್ಸೆ ಕೊಡಿಸಬೇಕು ಎಂದು ತಿಳಿಸಿದರು.

ನಂತರ ಮಾತನಾಡಿದ ಆರೋಗ್ಯ ನಿರೀಕ್ಷಣಾಧಿಕಾರಿ ಅಂಬಮ್ಮ ಅವರು, ಮಳೆಗಾಲದಲ್ಲಿ ಹಾವುಗಳ ಓಡಾಟ ಹೆಚ್ಚಾಗುವುದರಿಂದ ಹಾವು ಕಚ್ಚುವ ಸಾಧ್ಯತೆ ಹೆಚ್ಚು ಇರುತ್ತದೆ. ಆದ್ದರಿಂದ ಸಾರ್ವಜನಿಕರು ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಹಾವು ಕಚ್ಚಿದ ಸಂದರ್ಭದಲ್ಲಿ ಮಂತ್ರ-ತಂತ್ರ ಹಾಗೂ ಮೂಢನಂಬಿಕೆಗಳ ಮೊರೆ ಹೋಗದೆ ಕೂಡಲೇ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆಯುವುದರಿಂದ ಜೀವ ಉಳಿಸಬಹುದು ಎಂದು ಹೇಳಿದರು.

ಹಾವು ಕಚ್ಚಿದಾಗ ಗಾಬರಿಯಾಗಬಾರದು. ರಕ್ತ ಸಂಚಾರವನ್ನು ತಡೆಯುವಂತೆ ಬಿಗಿಯಾಗಿ ಬಟ್ಟೆ ಅಥವಾ ಕಾಪಟ್ಟಿಯನ್ನು ಕಟ್ಟಬಾರದು. ಗಾಯವನ್ನು ಕತ್ತರಿಸಬಾರದು ಅಥವಾ ಯಾವುದೇ ವಸ್ತುವನ್ನು ಹಚ್ಚಬಾರದು. ಬಾಯಿಯಿಂದ ವಿಷ ಹೀರುವ ಪ್ರಯತ್ನ ಮಾಡಬಾರದು. ನಾಟಿ ಮದ್ದು ಸೇರಿದಂತೆ ಯಾವುದೇ ಅಸುರಕ್ಷಿತ ಪದ್ಧತಿಗಳನ್ನು ಅವಲಂಬಿಸಬಾರದು. ಹಾವನ್ನು ಹಿಡಿಯಲು ಅಥವಾ ಕೊಲ್ಲಲು ಪ್ರಯತ್ನಿಸಬಾರದು. ಅಮೂಲ್ಯ ಸಮಯ ವ್ಯಥ-ರ್ ಮಾಡದೆ ಕೂಡಲೇ ರೋಗಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಬೇಕು ಎಂದು ಆರೋಗ್ಯ ಶಿಕ್ಷಣ ನೀಡಿದರು. ಈ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆ ಸುಜಾತಾ, ಆಶಾ ಕಾರ್ಯಕರ್ತೆ ಶರಣಮ್ಮ, ತಾಯಂದಿರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ನ್ಯಾಯ ಸಿಗುವವರೆಗೆ ಸಂತ್ರಸ್ತ ಕುಟುಂಬಕ್ಕೆ ಧೈರ್ಯ ತುಂಬುವ ಕೆಲಸ ಮಾಡುತ್ತೇವೆ: ಅಂಜುಮನ್ ಕಮಿಟಿ

ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಪಟ್ಟಣದ ಪುರಸಭೆ ವ್ಯಾಪ್ತಿಯ ವಾರ್ಡ್ ನಂ. 1 ಕರಡಕಲ್?ಜಾಲಿಬೆಂಚಿ ರಸ್ತೆಯ ಪಕ್ಕದ ಖಾಸಗಿ ಜಮೀನಿನಲ್ಲಿ ಕ್ರೂರವಾಗಿ ಕೊಲೆಯಾಗಿದ್ದ ಕರಡಕಲ್ ನಿವಾಸಿ ಶ್ರೀಮತಿ ರಾಣಿ (ಗಂಡ: ತಿಪ್ಪಣ್ಣ) ಅವರ ಸಾವಿಗೆ ಕೊನೆಗೂ ನ್ಯಾಯ ದೊರೆತಿದೆ.**



ಬಡ ಕುಟುಂಬಕ್ಕೆ ಬೆನ್ನೆಲುಬಾಗಿ ನಿಂತು, ಆರೋಪಿಗಳಿಗೆ ತಕ್ಕ ಶಿಕ್ಷೆಯಾಗುವಂತೆ ಹಾಗೂ ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಸಿಗುವವರೆಗೂ ನಿರಂತರವಾಗಿ ಧ್ವನಿ ಎತ್ತಿ ಹೋರಾಡಿದ ಮೋಹನ್ ಗೋಸ್ಲೆ ಕರಡಕಲ್ಲ್ SC ST ದೌರ್ಜನ್ಯ ತಡೆ ಸಮಿತಿ ನಾಮನಿರ್ದೇಶಿತ ಸದಸ್ಯರು ಲಿಂಗಸುಗೂರು ಮಸ್ಕಿ ಸಿಂಧನೂರು. ಹಾಗೂ ಎಲ್ಲಾ ನಾಯಕರಿಗೆ ಮತ್ತು ಅವರ ತಂಡಕ್ಕೆ ಹೃತ್ಪೂರ್ವಕ ಅಭಿನಂದನೆಗಳು.

ಅಂಜುಮನ್ ಕಮಿಟಿಯಿಂದ ಸಾಂತ್ವನ ಹಾಗೂ ನೆರವು ಇಂದು ಅಂಜುಮನ್ ಕಮಿಟಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಕರಡಕಲ್ಲ್ ಗ್ರಾಮದಲ್ಲಿರುವ ನೊಂದ ಕುಟುಂಬದ ಮನೆಗೆ ಭೇಟಿ ನೀಡಿ, ಧೈರ್ಯ ತುಂಬಿ ರೇಷನ್ ಕಿಟ್ ವಿತರಿಸಿದರು.

"ಹುಟ್ಟು-ಸಾವು ಎಂಬುದು ಪ್ರತಿಯೊಬ್ಬರಿಗೂ ಒಂದಲ್ಲ ಒಂದು ದಿನ ಬಂದೇ ಬರುತ್ತದೆ. ಆದರೆ, ಯಾವುದೇ ಸಮುದಾಯದ ಮೇಲಾಗಲಿ ಅನ್ಯಾಯ, ದೌರ್ಜನ್ಯ ಹಾಗೂ ಕೊಲೆಯಂತಹ ಘಟನೆಗಳು ನಡೆದಾಗ ಯುವಕರು ಅದನ್ನು ಸಹಿಸದೆ ನ್ಯಾಯಕ್ಕಾಗಿ ಧ್ವನಿ ಎತ್ತಬೇಕು," ಎಂದು ಅಂಜುಮನ್ ಲಿಂಗಸೂಗೂರ ತಾಲೂಕು ಕಮಿಟಿಯ ನಾಯಕರು ಕರೆ ನೀಡಿದರು.

ಕುಟುಂಬಕ್ಕೆ ಯಾವುದೇ ರೀತಿಯ ತೊಂದರೆ ಅಥವಾ ಸಮಸ್ಯೆ ಎದುರಾದರೆ ತಕ್ಷಣ ನಮಗೆ ಅಥವಾ ನಿಮ್ಮ ಜೊತೆಗಿರುವ ನಾಯಕರಿಗೆ ಫೋನ್ ಮಾಡಿ ತಿಳಿಸುವಂತೆ ಅಂಜುಮನ್ ಕಮಿಟಿ ಅಧ್ಯಕ್ಷರು ಮನವಿ ಮಾಡಿದರು ಈ ಸಂದರ್ಭದಲ್ಲಿ ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿಯ ಅಧ್ಯಕ್ಷರು ಹುಸೇನ್ ಭಾಷಾ, ಉಪಾಧ್ಯಕ್ಷರು ಮುಸ್ತಫಾ, ಅಂಜುಮನ್ ಕಮಿಟಿಯ ಸದಸ್ಯರಾದ ವಸೀಮ್ ಭಾಯಿ, ಅಲ್ಲಾಸಾಬ್, ಅಮೀನ್ ಭಾಯಿ, ಉಬೆದ್ ಖುರೇಶಿ, ಅಲ್ಲಾಬಕ್ಷ, ಸಾಬೀರ್ ಖುರೇಶಿ, ಸಿಕಂದರ್ ಮನಿಯಾರ್, ರಹೇಮಾನ್, ಸಲೀಂ, ಅಕ್ಬರ್, ಮಹೇಬೂಬ್, ಮೊಹಮ್ಮದ್, ಅಜ್ಮೀರ್, ಸದ್ದಾಂ, ಸಾದಿಕ್, ಉಮರ್, ವಸೀಮ್ ಅಕ್ರಂ, ಅಬ್ಬಾಸ್, ಹಜರತ್, ಉಮರ್ ಇನ್ನಿತರರು ಉಪಸ್ಥಿತರಿದ್ದರು.

# ಬಸವಾದಿ ಶರಣರ ಬದುಕು ಮಾದರಿ ಯಾಗಲಿ: ಸಾಹಿತಿ ಶಿವಲೀಲಾ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಬಸವಾದಿ ಶರಣರು ತಮ್ಮ ಅಮೂಲ್ಯ ವಚನಗಳಿಂದ 12ನೇ ಶತಮಾನದಲ್ಲಿ ಸಮ ಸಮಾಜವನ್ನು ನಿರ್ಮಾಣ ಮಾಡುವುದರ ಮೂಲಕ ಕ್ರಾಂತಿಯನ್ನು ತಂದರು.**



ವಚನಗಳಲ್ಲಿ ಅಗಾಧವಾದ ಶಕ್ತಿ ವಿದೆ, ಅವುಗಳಲ್ಲಿ ಬದುಕಿನ ಮೌಲ್ಯಗಳಿವೆ, ವಚನಗಳು ನಮಗೆ ಬದುಕಿನ ಉದ್ದೇಶವನ್ನು ತಿಳಿಸಿಕೊಡುತ್ತವೆ ಎಂದು ಶಿಕ್ಷಕಿ ಸಾಹಿತಿ ಶಿವಲೀಲಾ ಮಹಾಂತೇಶ ಮುರಾಳ ಹೇಳಿದರು. ಪಟ್ಟಣದ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ತಾಲೂಕ ಘಟಕ, ಯುವ ಘಟಕ ಹಾಗೂ ಕದಳಿ ವೇದಿಕೆ ವತಿಯಿಂದ ಶ್ರಾವಣ ಮಾಸದ ನಿಮಿತ್ಯವಾಗಿ ಹಮ್ಮಿಕೊಂಡ ವಚನ ಶ್ರಾವಣ ಎರಡನೇ ವಾರದ ಕಾರ್ಯಕ್ರಮದಲ್ಲಿ ವಚನಗಳಲ್ಲಿ ಬದುಕಿನ ಮೌಲ್ಯಗಳು" ಎಂಬ ವಿಷಯದ ಕುರಿತು ಸೋಮವಾರ ಸಂಜೆ ಅವರು ವಿಶೇಷ ಉಪನ್ಯಾಸ ನೀಡಿದರು.

ಬಸವಾದಿ ಶರಣರು ನಮಗೆ ಕಾಯಕ- ದಾಸೋಹ, ಲಿಂಗ ಪೂಜೆ, ಅರಿವು, ಭಕ್ತಿ ಹಾಗೂ ಶ್ರದ್ಧೆಯಂಥಹ ಅಮೂಲ್ಯಆಚಾರಗಳನ್ನುತಿಳಿಸಿಕೊಟ್ಟಿದ್ದಾರೆ ಅವುಗಳನ್ನು ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ನಾವೆಲ್ಲರೂ ಮಾಡಬೇಕಾಗಿದೆ. ಮೊಬೈಲ್ ಗೀಳಿನಿಂದಾಗಿ ಗಂಭೀರ ಸಮಸ್ಯೆಗಳು ಉದ್ಭವವಾಗುತ್ತಿವೆ. ಅದರ ಅತಿಯಾದ ಬಳಕೆಗೆ ಅವಕಾಶ ಮಾಡಿಕೊಡಬೇಡಿ, ಮಕ್ಕಳಿಗೆ ಉತ್ತಮ ತರಬೇತಿ ಹಾಗೂ ಸಂಸ್ಕಾರಗಳನ್ನು ನೀಡುವುದು ಹೆತ್ತವರ ಕರ್ತವ್ಯವಾಗಿದೆ ಇದರ ಕುರಿತು ನಿರ್ಲಕ್ಷೆ ಮಾಡಬೇಡಿ,ಶ್ರಾವಣ ಮಾಸದಲ್ಲಿ ಇಂಥಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯಬೇಕಾಗಿದೆ ಇದರ ಸಂಘಟಕರಿಗೆ ನಾನು ಅಭಿನಂದಿಸುತ್ತೇನೆ ಎಂದರು.

ಯುನಿಕ್ ಪ.ಪೂ. ವಿಜ್ಞಾನ ಕಾಲೇಜು ಅಧ್ಯಕ್ಷ ಎಂ.ಬಿ.ಮಡಿವಾಳರ ಮಾತನಾಡಿ ಭಾರತ ವಿಶ್ವ ಶ್ರೇಷ್ಠ ಸಂಸ್ಕೃತಿ ಮತ್ತು ಪರಂಪರೆಯನ್ನು ಹೊಂದಿದ ದೇಶವಾಗಿದೆ. ಇಲ್ಲಿ ಬಂದ ಸಂತ ಶರಣರು ಮಹಾಪುರುಷರು ನಮಗೆ ಬದುಕಿನ ಮಾರ್ಗವನ್ನು ತೋರಿಸಿದ್ದಾರೆ. ಅದರಲ್ಲಿ ನಾವು ಮುನ್ನಡೆಯುವ ಅಗತ್ಯವಿದೆ ಎಂದರು. ಶರಣ ಶ್ರೀ ವೀರಯ್ಯ ಮಠ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ದಶರಥಸಿಂಗ್ ಮನಗೂಳಿ, ಗಣ್ಯವರ್ತಕ ಅಶೋಕ ಶೆಟ್ಟಿ, ಖಾಜಾಹುಸೇನ ಮುಲ್ಲಾ, ಶ.ಸಾ.ಪ.ಯುವ ಘಟಕದ ಅಧ್ಯಕ್ಷ ಕಾಶಿನಾಥ ಸಜ್ಜನ, ಕದಳಿ ವೇದಿಕೆ ಅಧ್ಯಕ್ಷೆ ಉಮಾ ಬಸವರಾಜ ಸಾಲಂಕಿ, ಗಂಗಾಧರ ಕಸ್ತೂರಿ, ಮಹಾದೇವಪ್ಪ ಕುಂಬಾರ, ಸಮಾಜ ಸೇವಕ ಇಬ್ರಾಹಿಂ ಮನ್ಸೂರ, ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಸಾಹೇಬಗೌಡ ಬಿರಾದಾರ,ಆರ್. ಬಿ.ದಮ್ಮೂರಮಠ, ಗುಂಡೂರಾವ ಧನಪಾಲ, ಅಶೋಕ ಚಿನಗುಡಿ, ಪರಿಷತ್ತು ಹಾಗೂ ಕದಳಿ ವೇದಿಕೆ ಪದಾಧಿಕಾರಿಗಳು ಮತ್ತು ಬಸವಾಭಿಮಾನಿಗಳು ಉಪಸ್ಥಿತರಿದ್ದರು. ಶರಣೆ ಶ್ರೀಮತಿ ಅಶ್ವಿನಿ ಜೋಗೂರ ಪ್ರಾರ್ಥಿಸಿದರು.ಶರಣ ಗುರುನಾಥ ಕುಂಬಾರ ಸ್ವಾಗತಿಸಿದರು.ಶರಣ ಸಿದ್ದು ಕರಡಿ ನಿರೂಪಿಸಿ ವಂದಿಸಿದರು.

# ಭೂಮಾನಂದನ ಕೊಲೆ ಮತ್ತು ಅಶ್ವಿನಿ ಅತ್ಯಾಚಾರ ಕೊಲೆ ಖಂಡಿಸಿ, ಕಂಪ್ಲಿಯಲ್ಲಿ ನಡೆದ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ರಾಯಚೂರು ಜಿಲ್ಲೆಯ ದಲಿತ ಮುಖಂಡ ಭೂಮಾನಂದನ ಕೊಲೆ ಮತ್ತು ಅಶ್ವಿನಿ ಅತ್ಯಾಚಾರ ಕೊಲೆ ಖಂಡಿಸಿ, ಸಮಾನ ಮನಸ್ಕರ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ಪಟ್ಟಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿ, ಕಂದಾಯ ಅಧಿಕಾರಿ ಸುರೇಶ್‌ಗೆ ಮನವಿ ಪತ್ರ ಸಲ್ಲಿಸುವ ಮೂಲಕ ಸರ್ಕಾರಕ್ಕೆ ರವಾನಿಸಿದರು.**



ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಸುಂಕೇಶ್ವರಹಾಳ ಗ್ರಾಮದ ಯುವಕ ಭೂಮಾನಂದನ ಕೊಲೆ ಮತ್ತು ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ಯುವತಿ ಅಶ್ವಿನಿ ಅತ್ಯಾಚಾರ ಮತ್ತು ಕೊಲೆಯನ್ನು ತೀವ್ರವಾಗಿ ಖಂಡಿಸಿದ್ದು, ದಿನೇ ದಿನೇ ದಲಿತರ ಮೇಲೆ ದೌರ್ಜನ್ಯಗಳು, ಕೊಲೆಗಳು, ಅತ್ಯಾಚಾರಗಳು ಸಂಭವಿಸುತ್ತಿದ್ದು ಇದಕ್ಕೆ ನೇರ ಸರ್ಕಾರವೇ ಹೊಣೆ ಹಾಗೂ ನೊಂದ ದಲಿತ ಕುಟುಂಬಗಳಿಗೆ ಸೂಕ್ತ ರಕ್ಷಣೆ ಮತ್ತು ಸರ್ಕಾರವು ಉದ್ಯೋಗ ಮತ್ತು ಪರಿಹಾರ ಕೊಡಬೇಕು.

ಹಾಗೂ ಆರೋಪಿಗಳನ್ನು ಕೂಡಲೆ ಬಂಧಿಸಿ ಕಾನೂನಾತ್ಮಕವಾಗಿ ತನಿಖೆ ನಡೆಸಿ, ಈ ಕೃತ್ಯವನ್ನು ಮಾಡಿದವರಿಗೆ ಸಂಪೂರ್ಣ ವಿಚಾರಣೆ ನಡೆಸಿ ಆದಷ್ಟು ಬೇಗನೆ ಕಾನೂನಿನಡಿಯಲ್ಲಿ ಅತ್ಯಂತ ಕಠಿಣ ಶಿಕ್ಷೆ ವಿಧಿಸಬೇಕು. ದಲಿತರ ಮೇಲೇಗುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಲು ಕಾನೂನುಗಳಿದ್ದರೂ ತಪ್ಪಿತಸ್ತರ ಮೇಲೆ ಸೂಕ್ತ ಕ್ರಮಕ್ಕೆ ಮುಂದಾಗದಿರುವುದು ವಿಪರ್ಯಾಸ. ಹಾಗೂ ಅಪರಾದ ಪ್ರಕರಣಗಳು ಹೆಚ್ಚಾಗುತ್ತಾ ಇವೆ. ಅಲ್ಲದೆ ಅಪರಾಧಿ ಮನೋಭಾವನೆ ವ್ಯಕ್ತಿಗಳಲ್ಲಿ ಗಣನೀಯವಾಗಿ ಹೆಚ್ಚುತ್ತಿರುವುದು ದೇಶ ಮತ್ತು ರಾಜ್ಯದಲ್ಲಿ ಕಾನೂನು ಸೂವ್ಯವಸ್ತೆ ಸಡಿಲಗೊಳುತ್ತಿರುವುದು ಆತಂಕದ ವಿಷಯ.

ಇದಕ್ಕೆ ಸರ್ಕಾರವು ಕ್ರಮವಹಿಸಿ ತಡೆಗಟ್ಟಲು ಮುಂದಾಗಬೇಕೆಂದು ಸಮಾನ ಮನಸ್ಕರ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಹೆಚ್. ಮರಿಸ್ವಾಮಿ ಸಣಾಪುರ, ಎ. ಎಸ್.ಯಲ್ಲಪ್ಪ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಜಿ.ರಾಮಣ್ಣ, ಎ. ಲಕ್ಷ್ಮಿಪತಿ, ವಸಂತರಾಜ ಕಹಳೆ, ಚನ್ನಬಸುವ, ಶ್ರೀನಿವಾಸ, ರಾಮಸಾಗರ ಬಸವರಾಜ, ಹುಲುಗಪ್ಪ, ಮೆಟ್ರಿ ಬಸವರಾಜ, ರವಿ ಮಣ್ಣೂರು, ಬಸವರಾಜ, ತಿಪ್ಪೇಶ ಸೇರಿದಂತೆ ಅನೇಕರಿದ್ದರು.

## ನೇಮಕಾತಿ ಪ್ರಕಟಣೆ

**ಕರ್ನಾಟಕ ಸಮಾಜ ಕಲ್ಯಾಣ ಇಲಾಖೆ ನೇಮಕಾತಿ 2026 - 140 ವಸತಿ ಶಾಲೆ ಶಿಕ್ಷಕರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಆಗಸ್ಟ್ 24, 2026**

ಕರ್ನಾಟಕ ಸಮಾಜ ಕಲ್ಯಾಣ ಇಲಾಖೆ (SWD) ನೇಮಕಾತಿ 2026: ವಸತಿ ಶಾಲೆ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಆಗಸ್ಟ್ ೨೦೨೬ರ ಅಧಿಕೃತ ಅಧಿಸೂಚನೆಯ ಮೂಲಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 18–ಸೆಪ್ಟೆಂಬರ್–2026 ರೊಳಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: cetonline.karnataka.gov.in

## ಸಂಪೂರ್ಣವಾಗಿ ರೈತರಿಗೆ ನೀರು ಕೊಡಿ

ನೈಜ್ಯ ದೆಸೆ ನ್ಯೂಸ್

**ಯಾದಗಿರಿ: ಜಿಲ್ಲೆಯ ಸುರಪುರ ತಾಲೂಕಿನ ಕಿರದಹಳ್ಳಿ ಗ್ರಾಮದ ದಲಿತ ಮುಖಂಡರಾಗಿರತಕ್ಕಂತ ಮಡಿವಾಳಪ್ಪ ಕಟ್ಟಿಮನಿ ಇವರು. ಕೆ. ಬಿ.ಜೆ.ಎನ್.ಎಲ್ ಅಧಿಕಾರಿಗಳಿಗೆ ಕಿವಿ ಮಾತನ್ನು ಕೇಳಿದರು ಸಂಪೂರ್ಣವಾಗಿ ರೈತರ ಬೆಳೆಗಳಿಗೆ ನೀರನ್ನು ಒದಗಿಸಬೇಕು.**



ಈಗಾಗಲೇ ಲಾಲ್ ಬಹದ್ದೂರ್ ಶಾಸ್ತ್ರಿ ಅಣೆಕಟ್ಟು ಆಲಮಟ್ಟಿ ಮತ್ತು ಬಸವಸಾಗರ ಅಣೆಕಟ್ಟು ನಾರಾಯಣಪುರ ಜಲಾಶಯ ಭರ್ತಿಯಾಗಿದ್ದು. ರೈತರ ಬೆಳೆಗಳಿಗೆ ಬಲದಂಡೆ ಮತ್ತು ಎಡದಂಡೆ ಕಾಲುವೆಗಳಿಗೆ ನಿರಂತರವಾಗಿ ನೀರು ಹರಿಸಬೇಕು. ರೈತ–ರಿಗೆ ಸಂಪೂರ್ಣವಾಗಿ ಬೆಳೆಯ ಬೆಳೆಯಲು ಅನುಕೂಲ ಮಾಡಿಕೊಡಬೇಕು ಎಂದು ಹೇಳಿದರು. ಆದರೆ ಎಲ್ಲ ಸಲದ ನೆಪವನ್ನು ಹೇಳಿ ಕೊನೆಯ ದಂಡೆಯ ರೈತರಿಗೆ ಯಾವುದೇ ರೀತಿಯಿಂದ ನೀರು ಮುಟ್ಟುತ್ತಾಯಿಲ್ಲ ಕೂಡಲೇ ಅದರ ಬಗ್ಗೆ ಗಮನ ಹರಿಸಬೇಕು. ಒಂದು ವೇಳೆ ರೈತರಿಗೆ ಯಾವುದೇ ರೀತಿಯಿಂದ ತೊಂದರೆ ಮಾಡಿದರೆ. ಮುಂದಿನ ದಿನಮಾನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು. ಇದೇ ಸಂದರ್ಭದಲ್ಲಿ. ಅನೇಕ ರೈತರು ಮತ್ತು ಅನೇಕ ಸಂಘಟನೆ ಸದಸ್ಯರು ಹಾಜರಿದ್ದರು.

## ಹೃದಯಾಘಾತದಿಂದ ಪಿ.ಶ್ರೀಕಾಂತ ನಿಧನ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ:** ಪಟ್ಟಣದ 12ನೇ ವಾರ್ಡಿನ ಶಿಕಾರಿ ಕಾಲೋನಿಯ ಹಕ್ಕಿಪಿಕ್ಕಿ(ಪರ?ದಿ) ಅಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ



ಪಿ.ಶ್ರೀಕಾಂತ(60) ಹೃದಯಾಘಾತದಿಂದ ಮಂಗಳವಾರ ಬೆಳಗಿನ ಜಾವ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಜರುಗಲಿದೆ. ಹಕ್ಕಿಪಿಕ್ಕಿ ಸಮಾಜದ ಗೌರವಾಧ್ಯಕ್ಷ ಹೆಚ್.ಪಿ.ಶಿಕಾ–ರಿರಾಮು ಸೇರಿದಂತೆ ಸಮುದಾಯದವರು ಸಂತಾಪ ಸೂಚಿಸಿದರು.

## ವಚನ ಶ್ರಾವಣ ಹಾಗೂ ಷಟ್‌ಸ್ಥಲ ಧ್ವಜಾರೋಹಣ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಇಲ್ಲಿನ ಜಾಗತಿಕ ಲಿಂಗಾಯತ ಮಹಾಸಭಾ, ರಾಷ್ಟ್ರೀಯ ಬಸವ ದಳ ಸೋಮವಾರ ಪಟ್ಟಣದ ವಚನ ದಾಸೋಹಿ ಮುದಕಪ್ಪನೆಲಜೇರಿ ನಿವಾಸದಲ್ಲಿ ಹಮ್ಮಿಕೊಂಡಿದ್ದ ವಚನ ಶ್ರಾವಣ ಕಾರ್ಯಕ್ರಮ ನಡೆಯಿತು.**



ಪುರಸಭೆ ಮಾಜಿ ಸದಸ್ಯ ಎಸ್.ಎಂ.ನಾಗರಾಜ ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿ, ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಶರಣ ಸಾಹಿತ್ಯ ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಬೇಕಿದೆ. ಶರಣ ಸಾಹಿತ್ಯವು ಸರಳ ಸುಂದರ ಬದುಕನ್ನು ಪ್ರೇರೇಪಿಸುತ್ತದೆ ಎಂದರು. ಕನ್ನಡ ವಿವಿಯ ಸಂಶೋಧನಾರ್ಥಿ ಬೆರ?ಗಿ ಜಯಶ್ರೀ ಶರಣ ಸಾಹಿತ್ಯ ಕುರಿತ ಕನ್ನಡ ಸಾಹಿತ್ಯ ಕೃತಿಗಳು ಕುರಿತು ಮಾತನಾಡಿ, ಶರಣ ಸಾಹಿತ್ಯ ಜಗತ್ತಿನ ಶ್ರೇಷ್ಠ ಸಾಹಿತ್ಯವಾಗಿದ್ದು ಕನ್ನಡ ಸಾಹಿತ್ಯದಲ್ಲಿ ಶರಣ ಸಾಹಿತ್ಯ ಕುರಿತು ನಾನಾ ಕೃತಿಗಳು ಲೋಕಾರ್ಪಣೆಗೊಂಡಿವೆ. ಶರಣ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಮಹತ್ವದ ಸ್ಥಾನಗಳಿಸಿದೆ ಎಂದರು. ಚಿಕ್ಕಜಾಯಿಗನೂರಿನ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕಿ ಬಿ.ಎಂ.ಗಾಯತ್ರಿದೇವಿ ಕಾಯಕ ಶ್ರೇಷ್ಠತೆ ಕು–ರಿತು ಮಾತನಾಡಿ, ಕಾಯಕಗಳಲ್ಲಿ ಮೇಲು ಕೀಳು ಇಲ್ಲ. ಶರಣರು ಕಾಯಕದಿಂದ ಕೈಲಾಸ ಕಂಡಿದ್ದು, ಕಾಯಕವನ್ನು ಶ್ರದ್ಧೆ ನಿಷ್ಠೆಯಿಂದ ನಿರ್ವಹಿಸಿದರೆ ಕಲ್ಯಾಣ ರಾಜ್ಯವನ್ನು ಕಟ್ಟಬಹುದು. ಸತ್ಯ ಶುದ್ಧ ಕಾಯಕವನ್ನು ಶರಣ–ರು ಪರಿಚಯಿಸಿದ್ದಾರೆ. ನಮ್ಮ ಕಾಯಕವನ್ನು ಶುದ್ಧತೆಯಿಂದ ನಿರ್ವಹಿಸಿದಲ್ಲಿ ಸಮಾಜ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು. ಶ್ರೀರಕ್ಷಾ, ಮಲ್ಲಮ್ಮ, ಪ್ರಭಾವತಿ ನೆಲಜೇರಿ ವಚನಗಾಯನ ಮಾಡಿದರು. ಇಸಿಒ ಟಿ.ಎಂ.ಬಸವರಾಜ, ಪ್ರಮುಖರಾದ ಜಿ.ಪ್ರಕಾಶ, ಮುದಕಪ್ಪ ನೆಲಜೇರಿ, ಡಾ.ಬಿ.ಸುನಿಲ್, ಬಿ.ಎಂ.ಪುಷ್ಪಾ ರುದ್ರಯ್ಯ, ಅಶೋಕ ಕುಕನೂರು, ಡಾ.ಎಸ್.ಎಂ.ಸಾವಿತ್ರಿ, ವೀರಯ್ಯಸಾಲಿಮಠ, ಚಂದ್ರಯ್ಯಸೊಪ್ಪಿಮಠ, ಕೃಷ್ಣ ಎಸ್ ಪೋಳ್, ಹನುಮಂತಪ್ಪ, ದೊಡ್ಡಬಸಪ್ಪ, ಎನ್.ಬಿ.ರೇಣುಕಾರಾಧ್ಯ, ಗವಿವೀರನಗೌಡ, ಕೆ.ಎಂ.ವಾಗೀಶ್, ಜಿ.ಮೇಲಾರೆಡ್ಡಿ ಇತರರಿದ್ದರು. ಎಸ್.ರಾಮಪ್ಪ ನಿರೂಪಿಸಿ ವಂದಿಸಿದರು.

ನೈಜ್ಯ ದೆಸೆ

ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಲಿಂಗದಹಳ್ಳಿಯಲ್ಲಿ ವೈಭವದ 'ಪರ್ವ': ಕೃಷ್ಣಾ ನದಿ ತೀರದಲ್ಲಿ ಗಂಗಾ ಪೂಜೆ, ಅದ್ದೂರಿ ಮೆರವಣಿಗೆ

# ಸಾವಿರಾರು ಭಕ್ತರಿಂದ ಅದ್ದೂರಿ ಮೆರವಣಿಗೆ, ಕೃಷ್ಣಾ ನದಿಯಲ್ಲಿ ಗಂಗಾ ಪೂಜೆ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಸಮೀಪದ ಲಿಂಗದಹಳ್ಳಿ ಗ್ರಾಮದ ಶ್ರೀ ಪರಮಾನಂದ ದೇವಸ್ಥಾನದ ಜನಕಲ್ಯಾಣ ಟ್ರಸ್ಟ್ ವತಿಯಿಂದ ಮಳೆಗಾಗಿ ವಿಶೇಷ 'ಪರ್ವ' ಕಾರ್ಯಕ್ರಮವನ್ನು ಮಂಗಳವಾರ ಅದ್ದೂರಿಯಾಗಿ ಆಚರಿಸಲಾಯಿತು.**



ವರುಣನ ಕೃಪೆಗಾಗಿ ಶ್ರೀ ಪರಮಾನಂದ ದೇವರ ಸನ್ನಿಧಿಯಲ್ಲಿ ವಿಶೇಷ ಪೂಜೆ, ಮಹಾಭಿಷೇಕ ಹಾಗೂ ರುದ್ರಾಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಶ್ರಾವಣ ಮಾಸದ ಎರಡನೇ ವಾರದ ಅಂಗವಾಗಿ ದಿನವಿಡೀ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆದವು. ಕಾರ್ಯಕ್ರಮದ ಅಂಗವಾಗಿ ಭಕ್ತರು ಎಳ್ಳಚ್ಚಿದ ರೊಟ್ಟಿ, ಬದನೆಕಾಯಿ ಕಾಳು ಸೇರಿದಂತೆ ವಿವಿಧ ಸಾಂಪ್ರದಾಯಿಕ ಆಹಾರ ಪದಾರ್ಥಗಳನ್ನು ತಯಾರಿಸಿಕೊಂಡು ದೇವಸ್ಥಾನಕ್ಕೆ ಆಗಮಿಸಿದ್ದರು. ಬಳಿಕ ಶ್ರೀ ಪರಮಾನಂದ ದೇವರ ಕೊಡ ಹಾಗೂ ಬಿಂದಿಗೆಗಳನ್ನು ಹೊತ್ತುಕೊಂಡು ದೇವಸ್ಥಾನದಿಂದ ಸಮೀಪದ ಕೃಷ್ಣಾ ನದಿಯವರೆಗೆ ಭವ್ಯ ಮೆರವಣಿಗೆ ನಡೆಸಲಾಯಿತು.

ಕೃಷ್ಣಾ ನದಿ ತೀರದಲ್ಲಿ ವಿಶೇಷ ಕೃಷ್ಣಾರತಿ ಹಾಗೂ ಗಂಗಾ ಪೂಜೆ ಸಲ್ಲಿಸಲಾಯಿತು. ನಂತರ ನದಿಯಿಂದ ದೇವಸ್ಥಾನದ ಬೆಟ್ಟದವರೆಗೆ ಮೆರವಣಿಗೆ ನಡೆಯಿತು. ಮಹಿಳೆಯರ ಡೊಳ್ಳು ಕುಣಿತ, ಬಾಜಾ–ಭಜಂತ್ರಿ ತಂಡಗಳ ವಾದ್ಯಮೇಳ ಹಾಗೂ ಭಕ್ತರ ಸಂಭ್ರಮ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ನೀಡಿತು. ಪೂಜಾರಿಗಳಾದ ಮಲ್ಲಯ್ಯ ಸ್ವಾಮಿ ಅವರ ಸಾನಿಧ್ಯದಲ್ಲಿ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು. ದೇವಸ್ಥಾನದಲ್ಲಿ ವಿಶೇಷ ಪೂಜೆ, ಮಹಾಮಂಗಳಾರತಿ ಹಾಗೂ ಭಕ್ತರಿಗೆ ಶ್ರೀ ಪರಮಾನಂದ ದೇವರ ದರ್ಶನದ ವ್ಯವಸ್ಥೆ ಮಾಡಲಾಗಿತ್ತು.

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಹೋಬಳಿ ಸೇ–ರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಲಿಂಗದಹಳ್ಳಿ ಗ್ರಾಮದ ಗುರು–ಹಿರಿಯರು ಹಾಗೂ ಸರ್ವ ಭಕ್ತಾದಿಗಳು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

# ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಚಂದಪ್ಪ ಹಕ್ಕಿ ಅವರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ತಾಲೂಕಿನ ಪ್ರಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಚುಟುಕು ಸಾಹಿತಿ ಚಂದಪ್ಪ ಹಕ್ಕಿ ಅವರನ್ನು ಕುಷ್ಟಗಿ ತಾಲೂಕು ಚುಟುಕು ಸಾಹಿತ್ಯ ಪರಿಷತ್ ಪದಾಧಿಕಾರಿಗಳು ಹನುಮಸಾಗರದ ಅವರ ನಿವಾಸದಲ್ಲಿ ಸನ್ಮಾನಿಸಿ ಗೌರವಿಸಿದರು.**

ತಾಲೂಕಿನ ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನವನ್ನು ಸೆ.26ರಂದು ಆಯೋಜಿಸಲು ಚುಟುಕು ಸಾಹಿತ್ಯ ಪರಿಷತ್ ತಾಲೂಕು ಘಟಕ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಸಮ್ಮೇಳನದ ಸಿದ್ಧತೆ ಹಾಗೂ ಕಾರ್ಯಕ್ರಮದ ರೂಪುರೇಷೆಗಳ ಕುರಿತು ಪದಾಧಿಕಾರಿಗಳು ಚರ್ಚಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಸಮ್ಮೇಳನದ ಸರ್ವಾಧ್ಯಕ್ಷ ಚಂದಪ್ಪ ಹಕ್ಕಿ, "ಸರ್ವಾಧ್ಯಕ್ಷರಾಗಿ ಆಯ್ಕೆ ಮಾಡಿರುವ ಚುಟುಕು ಸಾಹಿತ್ಯ ಪರಿಷತ್ ಪದಾಧಿಕಾರಿಗಳಿಗೆ ಕೃತಜ್ಞತೆಗಳು. ನೀಡಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಿ, ಎಲ್ಲರ ಸಹಕಾರದೊಂದಿಗೆ ಸಮ್ಮೇಳನವನ್ನು ಅರ್ಥಪೂರ್ಣವಾಗಿ ನಡೆಸಲಾಗುವುದು. ಚುಟುಕು ಸಾಹಿತ್ಯದ ಬೆಳವಣಿಗೆಗೆ ಸಮ್ಮೇಳನ ಹೊಸ ವೇದಿಕೆಯಾಗಲಿದೆ" ಎಂದರು.

ಹಿರಿಯ ಸಾಹಿತಿ ಹನುಮೇಶ ಗುಮಗೇರಿ ಮಾತನಾಡಿ, ಚುಟುಕು ಸಾಹಿತ್ಯ ಕಡಿಮೆ ಪದಗಳಲ್ಲಿ ಗಂಭೀರ ವಿಚಾರಗಳನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುವ ಶಕ್ತಿ ಹೊಂದಿದೆ. ಯುವ ಬರಹಗಾರರು ಚುಟುಕು ಸಾಹಿತ್ಯದತ್ತ ಹೆಚ್ಚಿನ ಆಸಕ್ತಿ ತೋರಬೇಕು. ಪ್ರಥ–'ಮ ಸಮ್ಮೇಳನವನ್ನು ಎಲ್ಲರ ಸಹಕಾರದೊಂದಿಗೆ ಮಾದರಿಯಾಗಿ ನಡೆಸಬೇಕು ಎಂದರು. ಹಿರಿಯ ಪತ್ರಕರ್ತ ರವೀಂದ್ರ ಬಾಕಳೆ ಮಾತನಾಡಿ, ಚಂದಪ್ಪ ಹಕ್ಕಿ ಅವರು ಕಸಾಪ ತಾಲೂಕು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಮೂರು ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಿದ ಅನುಭವ ಹೊಂದಿದ್ದಾರೆ. ಎರಡು ಚುಟುಕು ಸಂಕಲನಗಳನ್ನು ರಚಿಸಿರುವ ಅವರು ಚುಟುಕು ಸಾಹಿತ್ಯ ಕ್ಷೇತ್ರದಲ್ಲೂ ಗಮನಾರ್ಹ ಕೆಲಸ ಮಾಡಿದ್ದಾರೆ. ಇಂತಹ ಅನುಭವ ಹೊಂದಿರುವವರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ಉತ್ತಮ ಬೆಳವಣಿಗೆ ಎಂದರು. ಚುಟುಕು ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಮಹೇಶ್ ಹಡಪದ್ ಮಾತನಾಡಿ, ತಾಲೂಕಿನಲ್ಲಿ ಪ್ರಥಮ ಬಾರಿಗೆ ಚುಟುಕು ಸಾಹಿತ್ಯ ಸಮ್ಮೇಳನ ಆಯೋಜಿಸುತ್ತಿರುವುದು ಸಂತಸದ ಸಂಗತಿ. ಸಮ್ಮೇಳನ ಯಶಸ್ವಿಗೆ ಸಾಹಿತಿಗಳು, ಕವಿಗಳು,



ಸಾಹಿತ್ಯಾಸಕ್ತರು, ಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಕಾರ ಅಗತ್ಯ ಎಂದರು. ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಲೆಂಕಪ್ಪ ವಾಲಿಕಾರ ಮಾತನಾಡಿ, ಚುಟುಕು ಸಾಹಿತ್ಯ ಸಮ್ಮೇಳನವು ಹೊಸ ಬರಹಗಾರ–ರಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಸಾಹಿತ್ಯಾಸಕ್ತರನ್ನು ಒಂದೆಡೆ ಸೇರಿಸುವ ವೇದಿಕೆಯಾಗಬೇಕು. ಸಮ್ಮೇಳನದ ಯಶಸ್ಸಿಗೆ ಅಗತ್ಯ ಸಹಕಾರ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಚುಸಾಪ ಪದಾಧಿಕಾರಿಗಳಾದ ಶಿವಾಜಿ ಹಡಪದ್, ಪರಶಿವಮೂರ್ತಿ ಮಾಟಲದಿನ್ನಿ, ವಿಶ್ವನಾಥ ಅಂಬ್ಲಿಕೊಪ್ಪಮಠ, ಶ್ರೀನಿವಾಸ ಜಹಗೀರದಾರ, ಬೀರಪ್ಪ ಕಡ್ಲಿಮಟ್ಟಿ, ರಾಜುಕುಮಾರ ನಾಯಕ್, ವೀರಣ್ಣ ಅಂಗಡಿ, ರಾಮನಗೌಡ ಗೌಡಪ್ಪನವರ, ಬಸವರಾಜ, ಹುಲೇಂದ್ರ, ಶಿವರಾಜ ಬಂಡಿಹಾಳ, ಏಕನಾಥ ಮೆದಿಕೇರಿ, ವಸಂತಕುಮಾರ ಸಿನ್ನೂರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಅಂಧರ ಬಾಳಿನಲ್ಲಿ ಬೆಳಕು ನೀಡಲು ನಮ್ಮ ಮರಣಾಂತರ ನೇತ್ರದಾನಕ್ಕಾಗಿ ಇಂದೆ ಪ್ರತಿಜ್ಞೆ ಮಾಡೋಣ:

ನೈಜ್ಯ ದೆಸೆ ನ್ಯೂಸ್

**ಮುದಗಲ: ಜೀವನದ ಆಕಸ್ಮಿಕ ಘಟನೆ ಅಥವಾ ಕಾರ್ನಿಯಾ ಹಾನಿಯಿಂದ ಅಂಧತ್ವಕ್ಕೊಳಗಾದವ–ರಿಗೆ ಜೀವನದಲ್ಲಿ ಹೊಸ ಆಶಾಕಿರಣವೆ ಇನ್ನೊಬ್ಬರು ಮಾಡುವ ನೇತ್ರದಾನದಿಂದ ಕಾರ್ನಿಯಾ ಕಸಿ ಮಾಡಿ ದೃಷ್ಟಿ ಮರುಳಿಸಲು ಸಾಧ್ಯತೆಗಳಿಗಾಗಿ ನಾವು ನೇತ್ರದಾನ ಮಾಡೋಣವೆಂದು ಆಡಳಿತ ವೈದ್ಯಾಧಿಕಾರಿ ಡಾ ಚಂದ್ರಕಾಂತ ತಿಳಿಸಿದರು.**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಅಂಧತ್ವ ನಿಯಂತ್ರಣ ವಿಭಾಗ, ರಾಯಚೂರ ರವರ ಸಂಂ–ಯೋಗದಲ್ಲಿ ಸಮುದಾಯ ಆರೋಗ್ಯ ಕೇಂದ್ರ ಮುದಗಲ್ಲನಲ್ಲಿ ನೇತ್ರದಾನ ಪಾಕ್ಷಿಕ ಕುರಿತು ಜನತೆಗೆ ಜಾಗೃತಿ ನೀಡಿ ಮಾನತಾಡುತ್ತಾ, ಯಾವುದೊ ಘಟನೆಯಿಂದ ಅಂಧತ್ವಕ್ಕೆ ಒಳಗಾದವರ ಬಾಳಿಗೆ ಬೆಳಕಾಗಲು ಮತ್ತು ನೇತ್ರದಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು



ಪ್ರತಿವರ್ಷ ಆಗಸ್ಟ್ 25 ರಿಂದ ಸೆಪ್ಟೆಂಬರ್ 8 ರವರೆಗೆ ರಾಷ್ಟ್ರೀಯ ನೇತ್ರದಾನ ಪಾಕ್ಷಿಕವನ್ನು ಆಚರಿಸಲಾಗುತ್ತಿದ್ದು, ಪ್ರತಿಯೊಬ್ಬರೂ ಸಹ ನೇತ್ರದಾನ ಮಾಡುವ ಪ್ರತಿಜ್ಞೆ ಹಾಗೂ ನೊಂದಣಿ ಮಾಡಿಸಿಯೆಂದು ವಿನಂತಿಸಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶಾರದಾ ಮಾತನಾಡಿ ರಾಯಚೂರು ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನೇತ್ರದಾನಿಗಳ ಕಣ್ಣುಗಳನ್ನು, ಅಂಧತ್ವವಿರುವ ಹಾಗೂ ಈಗಾಗಲೆ ನೋಂದಣಿ ಮಾಡಿಸಿಕೊಂಡವ–ರಿಗೆ ಶಸ್ತ್ರಚಿಕಿತ್ಸೆ ಮೂಲಕ ಕಸಿಮಾಡಿ ಅಂಧತ್ವ ತೆಗೆದುಹಾಕಿ ಜಗತ್ತನ್ನು ನೋಡುವ ಪೂಣ್ಯದ ಕೆಲಸ ಮಾಡಲಾಗುತ್ತಿದೆ. ಮರಣಾನಂತರ ನೇತ್ರದಾನವಲ್ಲದೆ ಇತರ ಅಂಗಗಳ ದಾನ ಮಾಡಲು ಜಾಗೃತಿಗಾಗಿ ↿ಣಣಠಿ//:ಟಿಂಣ–ಣಠ.ಚಿಭಜಟ.ರಠತ.ಿಟಿ ಮೂಲಕ ನೊಂದಣಿ ಮಾಡಿಸಬಹುದಾಗಿದೆ ಎಂದರು.

ಈ ಸಂದರ್ಭದಲ್ಲಿ ಹಿರಿಯ ವೈದ್ಯರಾದ ಡಾ ಅನಂತಕುಮಾರ್, ಆಯುಷ್ ವೈದ್ಯರಾದ ವಿನೋದ್ ಕುಮಾರ್, ಆರ್‌ಕೆ–ಎಸ್‌ಕೆ ಆಪ್ತಸಮಾಲೋಚಕರು ಗೌರಮ್ಮ, ಶುಶ್ರೂಷಣಾಧಿಕಾರಿ ಅಜೀಜಾ ಸುಲ್ತಾನ್, ಆರೋಗ್ಯ ಮಿತ್ರ ಬಸವರಾಜ್ ಸೇರಿದಂತೆ ಇತರೆ ಸಿಬ್ಬಂದಿಯರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಹಡಪದ ಅಪ್ಪಣ್ಣನವರ ತತ್ವಾದರ್ಶಗಳು ಸಮಾಜಕ್ಕೆ ದಾರಿದೀಪ: ಪರಣ್ಣ ಮುನವಳ್ಳಿ



ನೈಜ್ಯ ದೆಸೆ ನ್ಯೂಸ್

**ಗಂಗಾವತಿ: ನಗರದ ತಾಲೂಕು ಆಡಳಿತ, ಗ್ರಾಮ ಪಂಚಾಯಿತಿ ಹಾಗೂ ನಗರಸಭೆ ಸಹಯೋಗದಲ್ಲಿ ಉಳ್ಳಿಡಗ್ಗಿಕ್ಯಾಂಪ್ ಅಜ್ಮೀರ್ ಸಾಬ ಲೇಔಟ ಸಾಯಿ ವಿನಾಯಕ ಆಸ್ಪತ್ರೆ ಹಿಂಭಾಗ 2. ನೇ ವಾರ್ಡ್ ನಲ್ಲಿ ಹಡಪದ ಅಪ್ಪಣ್ಣ ಸಮಾಜದ ವತಿಯಿಂದ ಶ್ರೀ ನಿಜಸುಖಿ ಶಿವಶರಣ ಹಡಪದ ಅಪ್ಪಣ್ಣನವರ 892ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.**

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ನಿಕಟಪೂರ್ವ ಶಾಸಕ ಪರಣ್ಣ ಮುನವಳ್ಳಿ, 12ನೇ ಶತಮಾನದಲ್ಲಿ ಸಮಾಜದಲ್ಲಿ ಅಸಮಾನತೆ, ಜಾತಿಭೇದ ಹಾಗೂ ಕಂದಾಚಾರಗಳು ಹೆಚ್ಚಾಗಿದ್ದ ಸಂದರ್ಭದಲ್ಲಿ ಶರಣರು ತಮ್ಮ ವಚನಗಳ ಮೂಲಕ ಸಮಾನತೆ ಮತ್ತು ಸಾಮಾಜಿ–ಕ ನ್ಯಾಯದ ಸಂದೇಶವನ್ನು ಸಾರಿದರು. ಅಂತಹ ಮಹಾನ್ ಶರಣರಲ್ಲಿ ಹಡಪದ ಅಪ್ಪಣ್ಣನವರು ಪ್ರಮುಖರಾಗಿದ್ದಾರೆ ಎಂದರು. ಹಡಪದ ಅಪ್ಪಣ್ಣನವರು ಕಾಯಕಕ್ಕೆ ಮಹತ್ವ ನೀಡಿ, 'ಕಾಯಕವೇ ಕೈಲಾಸ' ಎಂಬ ಶರಣರ ಆಶಯದಂತೆ ಪ್ರಾಮಾಣಿಕ ದುಡಿಮೆಯ ಮೂಲಕ ಬದುಕುವ ಸಂದೇಶವನ್ನು ಸಮಾಜಕ್ಕೆ ನೀಡಿದ್ದಾರೆ. ಅವರ ಸರಳತೆ, ಸತ್ಯನಿಷ್ಠೆ, ಕಾಯಕದ ಮೇಲಿನ ಗೌರವ ಹಾಗೂ ಮಾನವೀಯ ಮೌಲ್ಯಗಳು ಇಂದಿನ ಸಮಾಜಕ್ಕೂ ಅತ್ಯಂತ ಪ್ರಸ್ತುತವಾಗಿವೆ ಎಂದು ಹೇಳಿದರು.

ಇಂದಿನ ಯುವಜನತೆ ಶರಣ–ರ ಜೀವನ ಮತ್ತು ವಚನಗಳನ್ನು ಅಧ್ಯಯನ ಮಾಡಿ, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕೇವಲ ಜಯಂತಿ ಆಚರಣೆಗೆ ಸೀಮಿತವಾಗದೆ, ಹಡಪದ ಅಪ್ಪಣ್ಣನವರ ತತ್ವಗಳನ್ನು ನಮ್ಮ ದಿನನಿತ್ಯದ ಬದುಕಿನಲ್ಲಿ ಪಾಲಿಸುವುದೇ ಅವ–ರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ ಎಂದು ಪರಣ್ಣ ಮುನವಳ್ಳಿ ಹೇಳಿದರು

ಸಮಾಜದ ಎಲ್ಲ ವರ್ಗದ ಜನರು ಒಗ್ಗಟ್ಟಿನಿಂದ ಮುಂದೆ ಸಾಗಬೇಕು. ಶಿಕ್ಷಣ–ಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಮಕ್ಕಳಿಗೆ ಉತ್ತಮ ಭವಿಷ್ಯ ಕಲ್ಪಿಸಬೇಕು. ಸಮಾಜದ ಅಭಿವೃದ್ಧಿಗೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಅವರು ಕರೆ ನೀಡಿದರು. ನಂತರ ಮಾತನಾಡಿದ ಪ್ರಥಮ ದರ್ಜೆ ಗುತ್ತಿಗೆದಾರ ವೀರಯ್ಯಸ್ವಾಮಿ ಹಿರೇಮಠ ಹೇರೂರು, ಹಡಪದ ಅಪ್ಪಣ್ಣನವರ ಸಾಮಾಜಿಕ ಸಂದೇಶಗಳು ಇಂದಿಗೂ ಪ್ರಸ್ತುತವಾಗಿದ್ದು, ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು.

ಬಿಜೆಪಿ ಪಕ್ಷದ ಯುವ ಮುಖಂಡ ಸಂಗಮೇಶ ಸುಗ್ರೀವ ಮಾತನಾಡಿ, ಶರಣರ ವಿಚಾರಧಾರೆಗಳು ಸಮಾಜದಲ್ಲಿ ಸಮಾನತೆ, ಸಹೋದರತ್ವ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಹಡಪದ ಅಪ್ಪಣ್ಣನವರ ಸಂದೇಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ದಿವ್ಯಸಾನಿಧ್ಯ ಶ್ರೀ ವೇ. ಮೂ.ಭುವನೇಶ್ವರಯ್ಯ ತಾತನವರು,ಬೃಹನ್ಮಠ ಸುಳೇಕಲ್,ಮಾಜಿ ನಗರ ಯೋಜನ ಪ್ರಾದಧಿಕಾರ ಅಧ್ಯಕ್ಷ ಮಹಾಲಿಂಗಪ್ಪ ಬನ್ನಿಕೊಪ್ಪ,ಮಾಜಿ ನಗರಸಭೆ ಸದಸ್ಯ ರಾಚ್ಚಪ್ಪ ಸಿದ್ದಾಪೂರು,ಮಾಜಿ ನಗರಸಭೆ ಸದಸ್ಯೆ ಶಾರದಮ್ಮ ಶಿವಣ್ಣ,ಬಸವರಾಜ, ದಿಲೀಪ್ ಕುಮಾರ್ ವಂದಾಲಿ,ಹಡಪದ ಅಪ್ಪಣ್ಣ ಸಮಾಜದ ಕೊಪ್ಪಳ ಜಿಲ್ಲಾ ಗೌರವ ಅಧ್ಯಕ್ಷ ಹನುಮಂತಪ್ಪ ಸರಿಗಮ,ಗಂಗಾವತಿ ಹಡಪದ ಅಪ್ಪಣ್ಣ ಸಮಾಜದ ಅಧ್ಯಕ್ಷ ನಿರುಪಾದಿ ಕೇಸರಹಟ್ಟಿ,ಸಹ ಕಾರ್ಯದರ್ಶಿ ಹೆಚ್. ಮಂಜುನಾಥ ಕನಕಗಿರಿ, ತಾಲೂಕು ನಗರ ಘಟಕ ಅಧ್ಯಕ್ಷ ವಿಕ್ರಮ್ ಪಾಟೀಲ್,ಎಸ್ ಡಿ. ಎಮ್ಸಿ ಅಧ್ಯಕ್ಷ ಬಸವರಾಜ ಹೆಚ್,ರಮೇಶ ಹತ್ತಿಮರದ್,ಸವಿತಾ ಸಮಾಜದ ತಾಲೂಕು ಅಧ್ಯಕ್ಷ ಮಾರೇಶ್,ಹಡಪದ ಅಪ್ಪಣ್ಣ ಸಮಾಜದ ತಾಲೂಕು ಉಪಾಧ್ಯಕ್ಷ ಭೀಮನಗೌಡ,ಶಿವಣ್ಣ ನೀಲಕಮಲ್,ಶರಣಪ್ಪ ಹಿರೇನಂದಿಹಾಳ,ಹೆಚ್ ಚಂದ್ರಶೇಖರ ಕನಕಗಿರಿ, ಪಂಪಾಪತಿ ಹೊಸಹಳ್ಳಿ,ಸೇರಿದಂತೆ ಇತರರು ಇದ್ದರು

## ವಚನ ದರ್ಶನ

ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕೈಯನೂರಿ, ಕೋಲ ಹಿಡಿಯದ ಮುನ್ನ, ಮುಪ್ಪಿಂದೊಪ್ಪವಳಿಯದ ಮುನ್ನ;ಮೃತ್ಯು ಮುಟ್ಟದ ಮುನ್ನ ಪೂಜಿಸು ಕೂಡಲಸಂಗಮದೇವನ.

12ನೇ ಶತಮಾನದ ಸಾಮಾಜಿಕ ಕ್ರಾಂತಿಕಾರಿ, ಜಗಜ್ಯೋತಿ ಶ್ರೀ ವಿಶ್ವಗುರು ಬಸವಣ್ಣನವರು ರಚಿಸಿರುವ ಅತ್ಯಂತ ಪ್ರಸಿದ್ಧ ಹಾಗೂ ಅರ್ಥಗರ್ಭಿತ ವಚನವಾಗಿದೆ.

ವಿಶ್ವಗುರು ಬಸವಣ್ಣನವರು ಈ ವಚನದ ಮೂಲಕ ಮನುಷ್ಯನಿಗೆ ಸಮಯದ ಮಹತ್ವ ಮತ್ತು ಯೌವನದಲ್ಲೇ ಆಧ್ಯಾತ್ಮಿಕ ಹಾಗೂ ಸತ್ಕಾರ್ಯಗಳತ್ತ ಒಲವು ತೋರಬೇಕಾದ ಅಗತ್ಯವನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ.

ನೆರೆ ಕೆನ್ನೆಗೆ, ತೆರೆ ಗಲ್ಲಕೆ ಕೂದಲು ನರೆತು ಕೆನ್ನೆ ಬಿಳಿಯಾಗುವ ಮುನ್ನ ಚರ್ಮ ಸುಕ್ಕುಗಟ್ಟಿ ಗಲ್ಲ ಜೋತುಬೀಳುವ ಮುನ್ನ

ಶರೀರ ಗೂಡುವೋಗದ ಮುನ್ನ ದೇಹದ ಶಕ್ತಿ ಉಡುಗಿ, ಜೀವವೆಂಬ ಹಕ್ಕಿ ಹಾರಿಹೋಗುವ ಮುನ್ನ.ಹಲ್ಲು ಹೋಗಿ, ಬೆನ್ನು ಬಾಗಿ,

ಅನ್ಯರಿಗೆ ಹಂಗಾಗದ ಮುನ್ನ ವಯಸ್ಸಾಗಿ ಹಲ್ಲುಗಳೆಲ್ಲ ಉದುರಿ, ಬೆನ್ನು ಬಾಗಿ ನಿಶ್ಯಕ್ತರಾಗಿ, ದಿನನಿತ್ಯದ ಕೆಲಸಗಳಿಗೂ ಇತರರ ಮೇಲೆ ಆಧಾರಪಡುವ ಮುನ್ನ.

ಕಾಲ ಮೇಲೆ ಕೈಯನೂರಿ, ಕೋಲ ಹಿಡಿಯದ ಮುನ್ನ ಎದ್ದು ನಿಲ್ಲಲು ಕಾಲುಗಳ ಮೇಲೆ ಕೈಯೂರಿ ಒದ್ದಾಡುವ ಮತ್ತು ನಡೆಯಲು ಕೈಯಲ್ಲಿ ಕೋಲು ಹಿಡಿಯುವ ಕಾಲ ಬರುವ ಮುನ್ನ.ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ: ಮುಪ್ಪಿನಿಂದ ವೃದ್ಧಾಪ್ಯ ದೇಹದ ಸೌಂದರ್ಯ ಹಾಗೂ ಕಳೆ ನಾಶವಾಗುವ ಮುನ್ನ ಮತ್ತು ಸಾವು ನಮ್ಮನ್ನು ಆವರಿಸುವ ಮುನ್ನ.

ಪೂಜಿಸು ಕೂಡಲಸಂಗಮದೇವನ ನಮ್ಮ ಆರಾಧ್ಯ ದೈವವಾದ ಕೂಡಲಸಂಗಮದೇವನನ್ನು ಶಿವನನ್ನು ಭಕ್ತಿಯಿಂದ ಆರಾಧಿಸು.ನಾವು ವೃದ್ಧರಾಗಿ, ದೇಹದ ಶಕ್ತಿಯನ್ನೆಲ್ಲ ಕಳೆದುಕೊಂಡು ಅಸಹಾಯಕರಾಗುವ ಮುನ್ನವೇ, ಅಂದರೆ ಶಕ್ತಿ ಇರುವ ಯೌವನ ಕಾಲದಲ್ಲೇ ಭಗವಂತನ ಸ್ಮರಣೆ ಹಾಗೂ ಸತ್ಕರ್ಮಗಳನ್ನು ಮಾಡಬೇಕು. ಮುಪ್ಪಿನ ಕಾಲದಲ್ಲಿ ದೇವರನ್ನು ನೆನೆಯುವುದು ಕಷ್ಟಸಾಧ್ಯ, ಆದ್ದರಿಂದ ಇಂದೇ ಧರ್ಮದ ಹಾದಿಯಲ್ಲಿ ನಡೆಯಬೇಕು ಎಂಬುದು ಇದರ ಸಂದೇಶವಾಗಿದೆ. ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

1ನೇ ಪುಟದಿಂದ....

ಮೊತ್ತದಲ್ಲಿಯೂ ಬೃಹತ್ ಜಿಗಿತ ಕಂಡುಬಂದಿದೆ. 2016-17ರಲ್ಲಿ ಕೇವಲ 0.07 ಲಕ್ಷ ಕೋಟಿ ರೂ. ಇದ್ದ ವಹಿವಾಟಿನ ಮೌಲ್ಯವು, 2025-26ರಲ್ಲಿ ಸುಮಾರು 314 ಲಕ್ಷ ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಇದು ಸುಮಾರು 4,000 ಪಟ್ಟು ಹೆಚ್ಚಳವಾಗಿದೆ.

ಅಧಿಕೃತ ಪ್ರಕಟಣೆಯ ಪ್ರಕಾರ, ಯುಪಿಐ ಇಂದು ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದ (ಡಿಪಿಐ) ಅತ್ಯಂತ ಯಶಸ್ವಿ ಸ್ತಂಭಗಳಲ್ಲಿ ಒಂದಾಗಿದೆ. ಒಂದೇ ಅಪ್ಲಿಕೇಶನ್ ಮೂಲಕ ತಡೆರಹಿತ, ಪರಸ್ಪರ ಕಾರ್ಯನಿರ್ವಹಿಸಬಹುದಾದ ಹಾಗೂ ನೈಜ-ಸಮಯದ ವ್ಯಕ್ತಿಯಿಂದ ವ್ಯಕ್ತಿಗೆ ಮತ್ತು ವ್ಯಕ್ತಿಯಿಂದ ವ್ಯಾಪಾರಿಗೆ ವಹಿವಾಟು ನಡೆಸಲು ಇದು ನಾಗರಿಕರಿಗೆ ಅವಕಾಶ ಮಾಡಿಕೊಟ್ಟಿದೆ. ಕಳೆದ ಹತ್ತು ವರ್ಷಗಳಲ್ಲಿ ಯುಪಿಐ ಉಚಿತ ಹಾಗೂ ಅತ್ಯಂತ ಜನಪ್ರಿಯ ಸೇವೆಯಾಗಿ ಬೆಳೆದಿದ್ದರೂ, ಕಾಲಕ್ಕೆ ತಕ್ಕಂತೆ ಕೆಲವು ಬ್ಯಾಂಕ್‌ಗಳು ಸುಸ್ಥಿರ ಆದಾಯ ಮಾದರಿಗಳತ್ತ ಹೆಜ್ಜೆಹಾಕಲು ಪ್ರಾರಂಭಿಸಿವೆ. ಉದಾಹರಣೆಗೆ, ಐಸಿಐಸಿಐ ಬ್ಯಾಂಕ್ ಈಗ ಯುಪಿಐ ವಹಿವಾಟುಗಳಿಗೆ ಪಾವತಿ ಸಂಗ್ರಾಹಕರಿಗೆ ಶುಲ್ಕ ವಿಧಿಸಲು ಮುಂದಾಗಿರುವುದು, ಮುಂಬರುವ ದಿನಗಳಲ್ಲಿ ಡಿಜಿಟಲ್ ಪಾವತಿ ವಲಯದಲ್ಲಿ ವಾಣಿಜ್ಯ ಹಾಗೂ ಸುಸ್ಥಿರತೆಯ ದೃಷ್ಟಿಯಿಂದ ಮಹತ್ವದ ಬದಲಾವಣೆಗಳಾಗುವ ಸಾಧ್ಯತೆಯನ್ನು ಸೂಚಿಸುತ್ತದೆ. ಚಹಾ ಅಂಗಡಿಯಿಂದ ಹಿಡಿದು ದೊಡ್ಡ ಮಾಲ್‌ಗಳವರೆಗೆ ಡಿಜಿಟಲ್ ಪಾವತಿಯನ್ನು ಜನಸಾಮಾನ್ಯರ ಜೀವನದ ಭಾಗವಾಗಿಸಿರುವ ಯುಪಿಐ, ಮುಂದಿನ ದಶಕಗಳಲ್ಲೂ ಜಾಗತಿಕ ಮಟ್ಟದಲ್ಲಿ ತನ್ನ ಹೆಜ್ಜೆಗುರುತುಗಳನ್ನು ಮತ್ತಷ್ಟು ಗಟ್ಟಿಗೊಳಿಸುವತ್ತ ಸಾಗುತ್ತಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ವಾಲ್ಮೀಕಿ ನಿಗಮ ಹಗರಣ ಖಂಡಿಸಿ ಬಿಜೆಪಿ ಬೃಹತ್ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

**ಬಾಗಲಕೋಟೆ: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಬಹುಕೋಟಿ ರೂಪಾಯಿ ಹಗರಣವನ್ನು ಖಂಡಿಸಿ ಹಾಗೂ ಸಚಿವ ಬಿ. ನಾಗೇಂದ್ರ ಅವರ ರಾಜೀನಾಮೆಗೆ ಆಗ್ರಹಿಸಿ ಭಾರತೀಯ ಜನತಾ ಪಕ್ಷದ ವತಿಯಿಂದ ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಸೋಮವಾರ ಬೃಹತ್ ಪ್ರತಿಭಟನಾ ಸಮಾವೇಶ ನಡೆಯಿತು.**

ಪ್ರತಿಭಟನೆಯಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾ ಅಧ್ಯಕ್ಷ ಶಾಂತಗೌಡ ಪಾಟೀಲ, ವಾಲ್ಮೀಕಿ ನಿಗಮದಲ್ಲಿ ನೂರಾರು ಕೋಟಿ ರೂ. ಸಾರ್ವಜನಿಕರ ಹಣ ದುರ್ಬಳಕೆಯಾಗಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ.



ಪ್ರಕರಣದ ನೈತಿಕ ಹೊಣೆ ಹೊತ್ತು ಸಚಿವ ಬಿ. ನಾಗೇಂದ್ರ ಅವರು ತಕ್ಷಣ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಬಡವರು, ಶೋಷಿತರು ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿಟ್ಟ ಹಣ ದುರ್ಬಳಕೆಯಾಗಿರುವುದು ಅತ್ಯಂತ ಖಂಡನೀಯ. ಹಗರಣದಲ್ಲಿ ಭಾಗಿಯಾಗಿರುವವರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನಾ ಸಮಾವೇಶದಲ್ಲಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಲೋಕಸಭಾ ಸದಸ್ಯ ಪಿ.ಸಿ. ಗದ್ದಿಗೌಡರ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರುಗೇಶ ನಿರಾಣಿ, ಮಾಜಿ ಶಾಸಕರಾದ ಶ್ರೀಕಾಂತ ಕುಲಕರ್ಣಿ, ರಾಜಶೇಖರ ಸಿಲವಂತ, ದೊಡ್ಡನಗೌಡ ಪಾಟೀಲ ಸೇರಿದಂತೆ ಪಕ್ಷದ ಹಿರಿಯ ಮುಖಂಡರು, ಜನಪ್ರತಿನಿಧಿಗಳು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು. ಪ್ರತಿಭಟನಾಕಾರರು ಭ್ರಷ್ಟಾಚಾರದ ವಿರುದ್ಧ ಘೋಷಣೆಗಳನ್ನು ಕೂಗಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

# ಹಿರಿಯ ಕಾಂಗ್ರೆಸ್ ಮುಖಂಡ ಎಲ್‌ಐಸಿ ಪ್ರತಿನಿಧಿ ಬಿ ಎಂ ನಾಗರಾಜ್ ದಣಿ ಇನ್ನಿಲ್ಲ

❑ ನೈಜ್ಯ ದೆಸೆ ನ್ಯೂಸ್

**ತಾಂಡವಪುರ: ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು ಚಿಕ್ಕಯ್ಯನ ಛತ್ರ ಹೋಬಳಿ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಬಂಚಳ್ಳಿ ಹುಂಡಿ ಗ್ರಾಮದ ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ಎಲ್‌ಐಸಿ ಪ್ರತಿನಿಧಿ ತಾಂಡವಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಬಿಎಂ ರಾಮುರವರ ಅಣ್ಣ ಬಿ ಎಂ ನಾಗರಾಜು ದಣಿ ಇಂದು ಬೆಳಗಿನ ಜಾವ ನಿಧನ ಹೊಂದಿದರು.**

ಬಿ ಎಂ ನಾಗರಾಜ್ ರವರು ನಂಜನಗೂಡು ಎಲ್‌ಐಸಿ ಬ್ರಾಂಚಿನ ಪ್ರತಿದಿಯಾಗಿ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದರು ಇವರು ತಿಂಗಳಿಗಳಿಂದ ಅನಾರೋಗ್ಯದಿಂದ ಬಳಲುತ್ತಾ ಇಂದು ಬೆಳಗಿನ ಜಾವ ನಿಧನ ಹೊಂದಿದರು, ಮೃತರು ಪತ್ನಿ ಇಬ್ಬರು ಪುತ್ರರು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಹಗಲಿದ್ದು ಮೃತರ ಅಂತ್ಯಕ್ರಿಯೆ ಅವರ ತೋಟದ ಜಮೀನಿನಲ್ಲಿ ನೆರವೇರಿಸಲಾಯಿತು



ಅಗಲಿದ ನಾಯಕನ ಅಂತಿಮ ದರ್ಶನ ಪಡೆದ ಲೋಕಸಭಾ ಸದಸ್ಯ ಸುನಿಲ್ ಬೋಸ್ ರಾಜ್ಯ ಮೃಗಾಲಯ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್ ಸಿ ಬಸವರಾಜು ಕಾಂಗ್ರೆಸ್ ಪಕ್ಷದ ಮುಖಂಡ ಎಂ ಲಕ್ಷ್ಮಣ ಬಿ ಎಂ ರಾಮುಶ್ರೀಕಂಠೇಶ್ವರ ದೇವಾಲಯದ ವ್ಯವಸ್ಥಾಪನೆ ಸಮಿತಿ ಮಾಜಿ ಅಧ್ಯಕ್ಷ ಹೆಜ್ಜಿಗೆ ಆರ್ ಇಂದನ್ ಬಾಬು ಜೆಡಿಎಸ್ ಮುಖಂಡ ನರಸಿಂಹಸ್ವಾಮಿ ಸಿದ್ದರಾಮಯ್ಯನವರ ಆಪ್ತ ಸಹಾಯಕ ಸಿಟಿ ಕುಮಾರ್ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರಾದ ರೇವಮ್ಮ ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಲಕ್ಷ್ಮೀ ಬಿಪಿ ಮಹಾದೇವ ಎಂ ಹುಚ್ಚೇಗೌಡ ಮಾಲೆಗೌಡ ಎಂ ಮಹಾದೇವ ಟಿ ಕೆ ನಾಗೇಶ ಮನ್ನೇಗೌಡ ಗುರುಶಾಂತು ಬಸವರಾಜು ಬಿಕೆ ಮರಿಗೌಡ ಟಿಬಿ ಚಿಕ್ಕಣ್ಣ ಬಿ ಬಸವಣ್ಣ ಉತ್ತನಹಳ್ಳಿ ಶಿವಣ್ಣ ಕಾಂಗ್ರೆಸ್ ಯುವ ಮುಖಂಡ ಬಿ ಆರ್ ರಾಕೇಶ್ ತ್ರಿಶೂಲ ಬ್ಯಾಟರಿ ಕಂಪನಿ ಮಾಲೀಕ ಅಭಿಷೇಕ್ ಅಣ್ಣಯ್ಯ ಅರ್ಕೇಶ ಎಂ ದಕ್ಷಿಣ ಮೂರ್ತಿ ಪ್ರಕಾಶ್ ಬಿ ಬಿ ಕುಮಾರ್ ಶಿವ ಮೂರ್ತಿ ಕೋಚನಹಳ್ಳಿ ಪುಟ್ಟಸ್ವಾಮಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಪಿ ಗಿರೀಶ್ ಮಲ್ಲುಪುರ ಪ್ರಕಾಶ್ ಕಿರಗುಂದ ಶಿವ ನಾಗ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಗಿರೀಶ್ ಹೆಗ್ಗಡ ಹಳ್ಳಿ ಹುಚ್ಚೇಗೌಡ ಗ್ರಾಮ ಪಂಚಾಯತಿ ಮಾಜಿ ಸದಸ್ಯರಾದ ಪ್ರಭು ಸಿದ್ದಮ್ಮ ರವಿ ನಟರಾಜು ಮಾರಮ್ಮ ಲೀಲಾವತಿ ಎನ್ ಚಂದ್ರು ಸಿ ಎನ್ ಚಂದ್ರು ಮಧು ಕೆ ರಾಜು ಶ್ರೀಕಂಠ ಸ್ವಾಮಿ ಮಧುರ ಬಿದರಗೂಡು ಸಿದ್ದಪ್ಪ ಮಹದೇವು ಚಿಕ್ಕಣ್ಣ ಸೇರಿದಂತೆ ಅನೇಕ ಮುಖಂಡರುಗಳು ಅಂತಿಮ ದರ್ಶನ ಪಡೆದು ಸಂತಪ ಸೂಚಿಸಿದರು

# ಜಾಲಹಳ್ಳಿಯಲ್ಲಿ ಕರಡು ಮತದಾರರ ಪಟ್ಟಿ ಸಾರ್ವಜನಿಕ ಪ್ರಚಾರ

❑ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ, ಆ.25: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ಮತಗಟ್ಟೆ ಸಂಖ್ಯೆ *108 (ಪ್ರಸ್ತುತ 109)*ರ ಮತಗಟ್ಟೆ ಅಧಿಕಾರಿಯಾದ ಶ್ರೀಮತಿ ಪ್ರಿಯಾಂಕ ಅವರು ವಿಶೇಷ ಸಂಕ್ಷಿಪ್ತ ಮತದಾರರ ಪಟ್ಟಿ ಪರಿಷ್ಕರಣೆ (ಖಖಖ) ಅಂಗವಾಗಿ ಕರಡು ಮತದಾರರ ಪಟ್ಟಿಯನ್ನು ಸಾರ್ವಜನಿಕರ ಸಮ್ಮುಖದಲ್ಲಿ ಪ್ರಚಾರಪಡಿಸಿದರು.**

ಗ್ರಾಮದ ಮತದಾನ ಕೇಂದ್ರದಲ್ಲಿ ನಡೆದ ಈ ಪ್ರಕ್ರಿಯೆಯಲ್ಲಿ ಸ್ಥಳೀಯ ಮತದಾರರ ಸಮ್ಮುಖದಲ್ಲೇ ಕರಡು ಮತದಾರರ ಪಟ್ಟಿಯನ್ನು ಪ್ರದರ್ಶಿಸಲಾಯಿತು. ಮತದಾರರು ತಮ್ಮ ಹೆಸರು, ವಿಳಾಸ ಹಾಗೂ ಇತರೆ ವಿವರಗಳನ್ನು ಪರಿಶೀಲಿಸಿಕೊಳ್ಳುವಂತೆ ಅಧಿಕಾರಿಗಳು ತಿಳಿಸಿದರು.

ಮತದಾರರ ಪಟ್ಟಿಯಲ್ಲಿ ಯಾವುದೇ ತಿದ್ದುಪಡಿ, ಹೆಸರು ಸೇರ್ಪಡೆ, ಹೆಸರು ತೆಗೆದುಹಾಕುವುದು ಅಥವಾ ವಿವರಗಳ ಬದಲಾವಣೆ ಅಗತ್ಯವಿದ್ದಲ್ಲಿ ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸುವಂತೆ ಮತಗಟ್ಟೆ ಅಧಿಕಾರಿ ಶ್ರೀಮತಿ ಪ್ರಿಯಾಂಕ ಅವರು ಮತದಾರರಿಗೆ ಮಾಹಿತಿ ನೀಡಿದರು.



ಈ ಸಂದರ್ಭದಲ್ಲಿ ಮತದಾರರು ತಮ್ಮ ಹೆಸರು, ವಿಳಾಸ ಹಾಗೂ ಇತರೆ ವಿವರಗಳನ್ನು ಪರಿಶೀಲಿಸಿಕೊಳ್ಳುವಂತೆ ತಿಳಿಸಲಾಯಿತು. ಪಟ್ಟಿಯಲ್ಲಿ ಯಾವುದೇ ತಿದ್ದುಪಡಿ, ಹೆಸರು ಸೇರ್ಪಡೆ, ಹೆಸರು ತೆಗೆದುಹಾಕುವುದು ಅಥವಾ ವಿವರಗಳ ಬದಲಾವಣೆ ಅಗತ್ಯವಿದ್ದಲ್ಲಿ ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸುವಂತೆ ಶ್ರೀ ಆಂಜನೇಯ ಅವರು ಮಾಹಿತಿ ನೀಡಿದರು.ಹಿ

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾದ ತಿಮ್ಮಣ್ಣ ನಾಯಕ ದಿವಾನ್, ಅಬ್ದುಲ್ ರಹೇಮಾನ್ ಖುರೇಸಿ, ಮಕ್ತುಮ್ ಪಾಶ, ಕುಮಾರ್ ಚಪ್ಪಳಕಿ ಹಾಗೂ ಊರಿನ ಮುಖಂಡರಾದ ಹುಸೇನ್ ನಾಸಿ, ಬುಡನ್ ಸಾಬ್, ಸುರೇಶ್, ಬಸವರಾಜ್ ವಂದಲಿ, ಭೀಮಣ್ಣ ಅಂಜಳ್, ನೂರ್ ಮೊಹಮ್ಮದ್ ಬಳಿಗಾರ್, ಕಲೀಮ್ ಉದ್ದಾರ, ನಬಿ ಟೈಲರ್, ಬಾಬಾ ಟೈಲರ್, ಬಾಶುಮಿಯ, ನಬಿ ದಾದೆಭಾಯಿ, ಶಿವರಾಜ್ ಹಾಗೂ ಮೌನೇಶ್ ಚಪ್ಪಳಕಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಮತಗಟ್ಟೆ 107ರಲ್ಲೂ ಕರಡು ಮತದಾರರ ಪಟ್ಟಿ ಪ್ರಚಾರ

**ಅದೇ ರೀತಿ ಜಾಲಹಳ್ಳಿ ಗ್ರಾಮದ ಮತಗಟ್ಟೆ ಸಂಖ್ಯೆ 107 (ಪ್ರಸ್ತುತ 108)*ರ ಮತಗಟ್ಟೆ ಅಧಿಕಾರಿಯಾದ ಶ್ರೀ ಆಂಜನೇಯ ಅವರು ಸಹ ಖಖಖ ಅಂಗವಾಗಿ ಕರಡು ಮತದಾರರ ಪಟ್ಟಿಯನ್ನು ಸಾರ್ವಜನಿಕರ ಸಮ್ಮುಖದಲ್ಲಿ ಪ್ರಚಾರಪಡಿಸಿದರು.**

# ಗುಂಡಾ, ವಗರನಾಳ ಗ್ರಾಮದ ರಸ್ತೆ ಒತ್ತುವರಿ ತೆರವಿಗೆ ಸಾರ್ವಜನಿಕರ ಸಹಕರಿಸಿ – ತಾಪಂ ಇಒ ಶಿವಾನಂದರಡ್ಡಿ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ : ತಾಲೂಕಿನ ಗುಂಡಾ ಮತ್ತು ವಗರನಾಳ ಗ್ರಾಮದಲ್ಲಿ ಹಾದು ಹೋಗುತ್ತಿರುವ ರಾಜ್ಯ ಹೆದ್ದಾರಿ ನಿರ್ಮಾಣಕ್ಕೆ ಸಾರ್ವಜನಿಕರು ಅಗತ್ಯ ಸಹಕಾರ ನೀಡಬೇಕು ಎಂದು ಮಸ್ಕಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶಿವಾನಂದರಡ್ಡಿ ಹೇಳಿದರು.**

ಗುಂಡಾ ಗ್ರಾಮ ಪಂಚಾಯತಿಯಿಂದ ಬಸ್ ನಿಲ್ದಾಣವರೆಗೆ ಮತ್ತು ವಗರನಾಳ ಗ್ರಾಮದಲ್ಲಿ ಕೈಗೊಂಡಿರುವ ರಸ್ತೆ ಒತ್ತುವರಿ ತೆರವು ಕಾಮಗಾರಿಯನ್ನು ಮಂಗಳವಾರ ವೀಕ್ಷಿಸಿದರು. ಗುಂಡಾ ಮತ್ತು ವಗರನಾಳ ಗ್ರಾಮದಲ್ಲಿ ರಾಜ್ಯ ಹೆದ್ದಾರಿ ಹಾದು ಹೋಗುವ ಕಾರಣ ಸಿಸಿ ರಸ್ತೆ, ಚರಂಡಿ ನಿರ್ಮಿಸಲಾಗುತ್ತಿದೆ. ಹೀಗಾಗಿ ರಸ್ತೆ ನಿರ್ಮಾಣಕ್ಕೆ ನಿಗದಿಪಡಿಸಿದ



ಜಾಗದಲ್ಲಿ ಮನೆ ಸೇರಿ ಇನ್ನಿತರ ಆಸ್ತಿಗಳಿದ್ದರೆ, ತೆರವುಗೊಳಿಸುವುದು ಅನಿವಾರ್ಯವಾಗಲಿದೆ. ಈಗಾಗಲೇ ಗ್ರಾಮ ಪಂಚಾಯತಿಯಿಂದ ನೋಟಿಸ್ ಜಾರಿಗೊಳಿಸಲಾಗಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಸರ್ಕಾರ ಕೈಗೊಳ್ಳುವ ಕಾಮಗಾರಿಗೆ ಎಲ್ಲರೂ ಅಗತ್ಯ ಸಹಕಾರ ನೀಡಬೇಕು. ಆಗಸ್ಟ್ 28 ರಂದು ಮತ್ತೊಮ್ಮೆ ರಸ್ತೆ ತೆರವು ಕಾರ್ಯ ವೀಕ್ಷಿಸಲಾಗುವುದು ಎಂದರು.

ಈ ವೇಳೆ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಗಜಾನನ, ಮಸ್ಕಿ ತಾಪಂ ವ್ಯವಸ್ಥಾಪಕರಾದ ಗಂಗಾಧರ ಮೂರ್ತಿ, ಗುಂಡಾ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ಸುಧೀರ್, ಗ್ರಾಪಂ ಸಿಬ್ಬಂದಿ ಮತ್ತು ಮುಖಂಡರು ಇದ್ದರು. ಇದಕ್ಕೂ ಮುನ್ನ ಅಕ್ಕ ಕೆಫೆ ಸ್ಥಾಪಿಸುವ ಸಲುವಾಗಿ ಮಸ್ಕಿ ಪುರಸಭೆಗೆ ಸಂಬಂಧಿಸಿದ ಎರಡು ಕಟ್ಟಡಗಳನ್ನು ತಾಪಂ ಇಒ ಶಿವಾನಂದರಡ್ಡಿ ವೀಕ್ಷಿಸಿದರು. ಓ ವೇಳೆ ಮಸ್ಕಿ ಪುರಸಭೆ ಮುಖ್ಯಾಧಿಕಾರಿ ನರಸರಡ್ಡಿ ಸಿಬ್ಬಂದಿ ಇದ್ದರು.


# ಜೆ ಜೆ ಎಂ ಕಾಮಗಾರಿ ನಿರ್ಲಕ್ಷ್ಯ ಅಧಿಕಾರಿ ಹಾಗೂ ಗುತ್ತಿಗೆದಾರರ ಮೇಲೆ ಕ್ರಮಕ್ಕೆ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: 2024-25ನೇ ಸಾಲಿನ ಜಲಧಾರೆ ಯೋಜನೆಯ ಅಡಿಯಲ್ಲಿ ಕೈಗೊಂಡ ಕಾಮಗಾರಿಯು ಮುಖ್ಯ ರಸ್ತೆಯ ಮಧ್ಯದಲ್ಲಿ, ತೋಡಿ ಪೈಪಗಳನ್ನು ಹಾಕಿ ಮಣ್ಣಿನಿಂದ ಮುಚ್ಚಲಾಗಿದೆ. ಸುಸ್ಥಿತಿಯಲ್ಲಿದ್ದ ಸಿ.ಸಿ. ಮುಖ್ಯ ರಸ್ತೆಗಳ ಮಧ್ಯದಲ್ಲಿ ತೋಡಿ ಪೈಪಗಳನ್ನು ಜೋಡಣೆ ಮಾಡಿದೆ ಆದರೆ ಸುಸ್ಥಿತಿಯಲ್ಲಿದ್ದ ಸಿ.ಸಿ ರಸ್ತೆಯನ್ನು ಜೆಸಿಬಿ ಮುಖಾಂತರ ಅಗೆದು ತೋಡಿ ಪೈಪಗಳನ್ನು ಹಾಕಿ ಮುಚ್ಚಿದ ನಂತರ ಸಿ.ಸಿ.ಹಾಕಿರುವುದಿಲ್ಲ. ಇದರಿಂದ ಗ್ರಾಮಸ್ಥರಿಗೆ ಓಡಾಡಲು ತೊಂದರೆ ಯಾಗುತ್ತಿದೆ ಜೆ ಜೆ ಎಂ ಕಾಮಗಾರಿ ನಿರ್ಲಕ್ಷ್ಯ ತೋರಿದ ಅಧಿಕಾರಿ ಹಾಗೂ ಗುತ್ತಿಗೆದಾರರ ಮೇಲೆ ಕ್ರಮಕ್ಕೆ ಒತ್ತಾಯಿಸಿ ಕ್ರಾಂತಿವೀರ ಸಂಗೋಳಿ, ರಾಯಣ್ಣ ಯುವ ಘರ್ಜನೆ (ರಿ) ನ ಜಿಲ್ಲಾ ಉಪಾಧ್ಯಕ್ಷ ನಂದೀಶ್ ಪೂಜಾರಿ ಕಾರ್ಯನಿರ್ವಾಹಕ ಅಧಿಕಾರಿಗೆ ಮನವಿಯನ್ನು ಸಲ್ಲಿಸಿದರು .**

ಲಿಂಗಸಗೂರು ತಾಲೂಕಿನ ವ್ಯಾಪಿಗೆ ಬರುವ ಹೊನ್ನಹಳ್ಳಿ ಗ್ರಾಮದಲ್ಲಿ ಊರಿನ ಸಾರ್ವಜನಿಕರಿಗೆ ವಯೋವೃದ್ಧರಿಗೆ ವಾಹನ ಸವಾರರಿಗೆ ಚಿಕ್ಕ ಚಿಕ್ಕ ಶಾಲಾ ಮಕ್ಕಳಿಗೆ ತೋಡಿದ ತಗ್ಗು ದಿನ್ನೆಯಲ್ಲಿ ಬಚ್ಚಲ ಹೊಲಸುನೀರು ನಿಂತು ಈ ನೀರಿನಲ್ಲಿ ದಾಟಲು ಹರಸಾಹಸ ಪಡಬೇಕಾದ ಪರಸ್ಥಿತಿ ನಿರ್ಮಾಣವಾಗಿದೆ. ಮತ್ತು ಜಾನುವಾರುಗಳು ಈ ರಸ್ತೆಯಲ್ಲಿ ಜಾರಿ ಬಿದ್ದು ಕಾಲು ಮುರಿದುಕುಳ್ಳುತ್ತಿವೆ ಇದರಿಂದ ರೈತರೇ ನಷ್ಟವನ್ನು ಅನುಭವಿಸಬೇಕಾಗುತ್ತದೆ.ಸಾರ್ವಜನಿಕರು ಕುಡಿಯುವ ನೀರಿನ ಸಲುವಾಗಿ ಮನೆ ಮನೆಗೆ ನಳಗಳನ್ನು ಕೂಡಿಸಿದ್ದು ಅವುಗಳ ಪೈಪಗಳು ಕೂಡಾ ಇದೇ ಮುಖ್ಯ ರಸ್ತೆಯಲ್ಲಿದ್ದು ರಸ್ತೆ ತೋಡಿಸಿ ಸಿ.ಸಿ. ಮಾಡದೇ ಬಿಟ್ಟಿರುವ ಸ್ಥಳದಲ್ಲಿ ದೊಡ್ಡ ವಾಹನಗಳ ಸಂಚಾರದಿಂದ ಕುಡಿಯುವ ನೀರಿನ ಪೈಪಗಳು ಮುರಿದುಹೋಗುತ್ತಿವೆ , ಈ ಸ್ಥಳದಲ್ಲಿ ಮುರಿದ ಪೈಪಗಳನ್ನು ತಾವೇ ತಮ್ಮ ಸ್ವಂತ ಖರ್ಚಿನಿಂದ ಹಾಕಿಸಿ ಕೊಂಡಿದ್ದರು ಪೈಪಗಳು ಎರಡು ದಿನದಲ್ಲಿ ಮುರಿಯುತ್ತವೆ.

ಇದರಿಂದ ಕುಡಿಯುವ ನೀರಿನ ಪೈಪಗಳಿಗೂ ಕೂಡಾ ಈ ರೀತಿಯಾಗಿ ಸಿ.ಸಿ. ರಸ್ತೆ ಹಾಕದೇ ಇರುವದರಿಂದ ಕುಡಿಯುವ ನೀರಿನ ಸಮಸ್ಯೆಯು ಆಗಿರುತ್ತದೆ. ಕುಡಿಯುವ ನೀರಿನ ಪೈಪಗಳು ಮುರಿದರೆ ಅವುಗಳನ್ನು ಜೋಡಣೆ ಮಾಡುವವರು ಯಾರು? ಈ



ಪೈಪಗಳು ಮುರಿಯಲು ಏನು ಕಾರಣ ಇದಕ್ಕೆ ಮುಖ್ಯ ಜಲಧಾರೆ ಯೋಜನೆಯ ಅಡಿಯಲ್ಲಿ ತೋಡಿದ ಪೈಪಗಳನ್ನು ಮುಚ್ಚಿದ ನಂತರ ಸಿ.ಸಿ. ಹಾಕದೇ ಇರುವದಕ್ಕೆ ಮುಖ್ಯ ಕಾರಣವಾಗಿರುತ್ತದೆ.

ಕಾಮಗಾರಿ ಪ್ರಾರಂಭ ಮಾಡಿ ಒಂದು ವರ್ಷ ಕಳೆದರೂ ಕೂಡಾ ಈ ಮುಖ್ಯ ರಸೆಯನ್ನು ತೋಡಿ ಸಿ.ಸಿ.ಹಾಕದೇ ಇರುವದರಿಂದ ಆಗುತ್ತಿರುವ ತೊಂದರೆಯನ್ನಾದರೂ ಪರಿಗಣಿಸಿ ಕಾಮಗಾರಿಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಸ್ಥಳ ಪರಿಶೀಲನೆ ಮಾಡಿ ಇಲ್ಲಿ ಸಾರ್ವಜನಿಕ ನಾಗರೀಕರಿಗೆ ಆಗುತ್ತಿರುವ ತೊಂದರೆಯನ್ನು ವೀಕ್ಷಣೆ ಮಾಡದೇ ಹಾಗೆಯೇ ಕುಳಿತುಕೊಂಡಿರುವದನ್ನು ಹೊನ್ನಹಳ್ಳಿ, ಸಾರ್ವಜನಿಕ ಗ್ರಾಮಸ್ಥರು ಉಗ್ರವಾಗಿ ಖಂಡಿಸುತ್ತೇವೆ. ಈ ನಮ್ಮ ಸಂಘಟನೆಯ / ಗ್ರಾಮದ ಸಾರ್ವಜನಿಕರ ಮನವಿ / ದೂರನ್ನು ಕೈಗೆತ್ತಿಕೊಂಡು ಸದರಿ ಹೊನ್ನಹಳ್ಳಿ ಗ್ರಾಮದ ಮುಖ್ಯ ರಸ್ತೆಯಲ್ಲಿ ತೆಗ್ಗು ತೋಡಿ ಪೈಪಗಳನ್ನು ಜೋಡಣೆ ಮಾಡಿ ಅದರ ಮೇಲೆ ಸಿ.ಸಿ. ರಸ್ತೆಯನ್ನು ಹಾಕಿಕೊಡಬೇಕು. ಈ ಕಾಮಗಾರಿ ಕುರಿತು ದಿನಾಂಕ: 13-08-2026 ರಂದು ಭಾರತೀಯ ಪ್ರಜಾ ಸಂಘ ಭೀಮ ನಡೆ ತಾಲೂಕ ಸಮೀತಿ ವತಿಯಿಂದ ಸಹಾಯಕ ಆಯುಕ್ತರು ಇವರಿಗೆ ಮನವಿಯನ್ನು ಸಲ್ಲಿಸಿದರೆ ತಾವುಗಳು ಮುಖ್ಯಕಾರ್ಯನಿರ್ಹಾಹಕ ಅಧಿಕಾರಿಗಳು ರಾಯಚೂರು ಇವರಿಗೆ ಪತ್ರ ಬರೆಯಿರಿ ಎಂದು ಹೇಳಿರುತ್ತಾರೆ, ಇದಕ್ಕೆ ಯಾವ ಅಧಿಕಾರಿಗಳು ಸರಿಯಾಗಿ ಸ್ಪಂದನೆ ಮಾಡುತ್ತಿಲ್ಲ, ಮತ್ತು ಸುಳ್ಳ, ಆಶ್ವಾಸನೆ ಕೊಡುತ್ತಿದ್ದಾರೆ. ಇದನ್ನು ಹೊನ್ನಳ್ಳಿ, ಗ್ರಾಮಸ್ಥರು ಯಾವ ಅಧಿಕಾರಿಗಳನ್ನು ದಿಕ್ಕು ತಪ್ಪಿ ಹುಡುಕ ಬೇಕಾದ ಪರಿಸ್ಥಿತಿ ನಿರ್ಮಾಣ ವಾಗಿದೆ. ಒಂದು ವೇಳೆ ಈ ನಮ್ಮ ಮನವಿ / ದೂರನ್ನು ಕೈಗೆತ್ತಿಕೊಂಡು 10-15ದಿನಗಳ ಅವಧಿಯ ಒಳಗಾಗಿ ಸಿ.ಸಿ. ಯನ್ನು ಹಾಕಿಕೊಡಬೇಕು. ಜೆ ಜೆ ಎಮ್ ಕಾಮಗಾರಿ ತಾಲೂಕಿನಲ್ಲಿ ಇದೇ ತರಹ ಅರ್ದ ಮರ್ದ ಕಾಮಗಾರಿ ಮಾಡಿರುತ್ತಾರೆ. ಇದರ ಕುರಿತು ಕೇಳಿದರೆ ಇದು ಸರಕಾರದ ಕಾಮಗಾರಿ ಎಂದು ಹೇಳುತ್ತಾರೆ ನೀವು ನಮಗೆ ಪದೇ ಪದೇ ಕೇಳಿದರೆ ನಿಮ್ಮ ಮೇಲೆ ಪೋಲೀಸ್ ಕಂಪ್ಲೆಂಟ್ ಕೊಡುತ್ತೇವೆಂದು ಹಳ್ಳಿ ಜನಕ್ಕ ಭಯ ಹುಟ್ಟಿಸುತ್ತಾರೆ. ಈ ಕಾಮಗಾರಿಯ ಅಧಿಕಾರಿಗಳು ಸಿಸಿ ಮಾಡದೇ ಕಾಮಗಾರಿ ಬಿಲ್ಲನ್ನು ಮಾಡಿಸಿಕೊಂಡು ಹೊಗುತ್ತಿದ್ದಾರೆ. ಈ ವಿಷಯದ ಕುರಿತು ನಿಷ್ಕಾಳಜಿ ತೋರಿದರೆ ಕ್ರಾಂತಿವೀರ ಸಂಗೊಳ್ಳಿ, ರಾಯಣ್ಣ ಯುವ ಘರ್ಜನೆ (ರಿ) ವತಿಯಿಂದ ತಮ್ಮ ಕಾರ್ಯಾಲಯ ಮುಂದೆ ಉಗ್ರ ಹೋರಾಟ ಮಾಡಲಾಗುವುದೆಂದು ಒತ್ತಾಯಿಸಿದರು . ಈ ಸಂದರ್ಭದಲ್ಲಿ ಬಸವರಾಜ ಹೊಸಮನಿ ಸೇರಿದಂತೆ ಇದ್ದರು .

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101